ಮುಕ್ತಿಯ ಮಾರ್ಗ

ಇನಾಮುರ್ರಹ್ಮಾನ್ ಖಾನ್
ಸಯ್ಯದ್ ಅಬುಲ್ ಆಲಾ ಮೌದೂದಿ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಮಾನವನ ಮುಕ್ತಿಯ ಮಾರ್ಗ ಯಾವುದು ಎಂಬುದರ ಬಗ್ಗೆ ವಿಭಿನ್ನ ದೃಷ್ಟಿಕೋನಗಳು ಪ್ರಚಲಿತವಿದೆ. ದೇವನು ಒಬ್ಬನೇ ಎಂದರೂ ದೇವರೇ ಇಲ್ಲವೆಂದರೂ ಒಂದಕ್ಕಿಂತ ಹೆಚ್ಚು ಅನೇಕ ದೇವರಿದ್ದಾರೆಂದು ನಂಬಿದರೂ ಏನೂ ವ್ಯತ್ಯಾಸವಾಗುವುದಿಲ್ಲ; ಮಾನವ ಮುಕ್ತಿ ಪಡೆಯಬಲ್ಲ ಎಂದು ವಾದಿಸುವವರಿದ್ದಾರೆ. ಆದರೆ ಮುಕ್ತಿಯ ಮಾರ್ಗ 'ಏಕಮಾತ್ರ' ಎಂಬುದೇ ಸತ್ಯ. ಆ ಮಾರ್ಗ ಯಾವುದು ಎಂಬ ಜಿಜ್ಞಾಸೆಗೆ ಈ ಕಿರು ಹೊತ್ತಿಗೆಯಲ್ಲಿ ಉತ್ತರ ನೀಡಲಾಗಿದೆ. ಇತಿಹಾಸದ ಎಲ್ಲ ಕಾಲಗಳಲ್ಲಿ ವಿಭಿನ್ನ ದೇಶಗಳಲ್ಲಿ ದೇವನಿಂದ ನಿಯುಕ್ತರಾದ ಪ್ರವಾದಿಗಳು ತಂದ ಮತ್ತು ಅದರಂತೆ ಮಾದರಿ ಬದುಕನ್ನು ಸಾಗಿಸಿದ ಪ್ರವಾದಿಗಳ ಮಾರ್ಗವೇ ನೈಜ ಹಾಗೂ ಏಕೈಕ ಮುಕ್ತಿಯ ಮಾರ್ಗವೆಂದು ಇದರಲ್ಲಿ ಆಧಾರ ಸಹಿತ ಪ್ರತಿಪಾದಿಸಲಾಗಿದೆ.

ಮಾನವರಲ್ಲಿರುವ ಇನ್ನೊಂದು ಕಲ್ಪನೆಯು ಪರಮತ ಸಹಿಷ್ಣುತೆಯ ಕುರಿತಾದದ್ದು. ಮಾನವ ಯಾವುದೇ ಮಾರ್ಗದಲ್ಲಿ ನಡೆದರೂ ಕೊನೆಗೆ ಅದು ದೇವನನ್ನು ತಲಪುತ್ತದೆ. ಆದುದರಿಂದ ಎಲ್ಲ ಮತ ಧರ್ಮಗಳೂ ಸರಿಯೆಂದು ಒಪ್ಪಿಕೊಳ್ಳುವುದೇ ಸರಿಯಾದ ಧೋರಣೆಯೆಂದು ಪರಧರ್ಮ ಸಹಿಷ್ಣುಗಳೆಂದು ಹೇಳಿಕೊಳ್ಳುವವರ ವಾದ. ಆದರೆ ಈ ವಿಚಾರ ಬಹಳ ಗಂಡಾಂತರಕಾರಿಯಾಗಿದ್ದು, ತಂತಮ್ಮ ವಿಶ್ವಾಸಾಚಾರವನ್ನು ಮಾರಿಕೊಳ್ಳುವುದಕ್ಕೆ ಸಮನಾಗಿದೆ. ವಾಸ್ತವದಲ್ಲಿ ತಮ್ಮ ವಿಶ್ವಾಸ-ಶ್ರದ್ಧೆಗಳನ್ನು ಪಾಲಿಸಿಕೊಂಡು ಇತರ ವಿಶ್ವಾಸಾಚಾರಗಳನ್ನು ಗೌರವಿಸುವುದೇ ನಿಜವಾದ ಪರಧರ್ಮ ಸಹಿಷ್ಣುತೆ ಎಂಬುದನ್ನು ಚುಟುಕಾಗಿ ಈ ಕಿರುಹೊತ್ತಿಗೆಯ ಇನ್ನೊಂದು ಲೇಖನದಲ್ಲಿ ಪ್ರತಿಪಾದಿಸಲಾಗಿದೆ. ಈ ಪುಸ್ತಕದ ಅಧ್ಯಯನದಿಂದ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಹೊಸ ಚಿಂತನೆಯೊಂದು ಮೂಡಿಬರಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಮುಕ್ತಿಯ ಮಾರ್ಗ

ಅಲ್ಲಾಹನ ಅಸ್ತಿತ್ವ

ಮಾನವನ ಅತಿ ಪ್ರಾಚೀನ ಚರಿತ್ರೆಗಳ ಅಧ್ಯಯನಗಳಿಂದ ನಮಗೆ ತಿಳಿದು ಬರುವ ಸತ್ಯಾಂಶವೇನೆಂದರೆ ಮನುಷ್ಯನ ಬುದ್ಧಿ ಮತ್ತು ಮನಸ್ಸು ಎಂದೂ ಧರ್ಮ ಮತ್ತು ದೇವರ ಕಲ್ಪನೆಗಳಿಂದ ಮುಕ್ತವಾಗಿರಲಿಲ್ಲ. ಮಾನವ, ಯಾವುದಾದರೊಂದು ವಿಧದಲ್ಲಿ ದೇವನ ಅಸ್ತಿತ್ವವನ್ನು ಒಪ್ಪಿದ್ದಾನೆ ಮತ್ತು ಆತನ ಆರಾಧನೆಯನ್ನು ಮಾಡಿದ್ದಾನೆ. ಈಗಲೂ ನಾಗರಿಕ ಮತ್ತು ಅನಾಗರಿಕ ಸಮಾಜದಲ್ಲಿ ದೇವರ ಮತ್ತು ಧರ್ಮದ ಕಲ್ಪನೆಗಳಿವೆ.

ದೇವನು ಹೇಗಿದ್ದಾನೆ, ಏಕನೋ ಅನೇಕರೋ, ಅವನ ಗುಣ ವಿಶೇಷಗಳಾವುವು, ಮಾನವನ ವಾಸ್ತವಿಕತೆ ಏನು, ಅವನ ಕೊನೆ ಹೇಗೆ, ದೇವನೊಂದಿಗೆ ಆತನ ಸಂಬಂಧ ಹೇಗಿರಬೇಕು ಎಂಬಿತ್ಯಾದಿ ಪ್ರಶ್ನೆಗಳ ಉತ್ತರ ಮತ್ತು ಆ ಉತ್ತರಗಳ ಸಹಜ ಬೇಡಿಕೆಯೇ ಧರ್ಮವಾಗಿದೆ. ಧರ್ಮವು ಸಹಜವಾಗಿಯೇ ಮಾನವನ ಪ್ರಕೃತಿಯಲ್ಲಿ ಸೇರಿದೆ. ಮಾನವನ ಜನ್ಮ ಈ ಸಹಜತೆಯೊಂದಿಗೇ ಆರಂಭಗೊಂಡಿದೆ ಮತ್ತು ಮಾನವನ ಅಸ್ತಿತ್ವದ ಕೊನೆ ತನಕ ಅದು ಇರುವುದು.

ದೇವನ ಮೇಲೆ ವಿಶ್ವಾಸವಿರಿಸಲು ಮತ್ತು ಆತನ ಮುಂದೆ ತನ್ನ ಶಿರವನ್ನು ಬಾಗಿಸಲು ಮಾನವನನ್ನು ನಿರ್ಬಂಧಿಸಿದ ವಿಷಯ ಯಾವುದು? ಸ್ವಲ್ಪ ಚಿಂತಿಸಿದರೆ ಇದಕ್ಕೆ ಉತ್ತರ ದೊರಕುತ್ತದೆ.

ಮಾನವನ ಅಸಹಾಯಕತೆ

ಮಾನವ ಅಸಹಾಯಕನಾಗಿ ಜನ್ಮ ತಾಳಿದ್ದಾನೆ. ಆತ ಎಷ್ಟೇ ಶಕ್ತಿವಂತನಾಗಿರಲಿ ಅಥವಾ ದುರ್ಬಲನಾಗಿರಲಿ ಆತ ಅಸಹಾಯಕನಾಗಿರುತ್ತಾನೆ. ಈ ಜಗತ್ತಿನಲ್ಲಿ ತನ್ನ ಅಸ್ತಿತ್ವವನ್ನು ರಕ್ಷಿಸಲು ಅವನಿಗೆ ಮೂಲಭೂತವಾಗಿ ಅವಶ್ಯಕತೆಯಿರುವ ಅನೇಕ ವಸ್ತುಗಳು ಆತನ ಹಿಡಿತದಿಂದ ಹೊರತಾಗಿದೆ. ಇನ್ನು ಅನೇಕ ವಸ್ತುಗಳು ಆತನಿಗೆ ಪ್ರಯೋಜನಕಾರಿಯಾಗಿದ್ದರೂ ಅದನ್ನು ಗಳಿಸಲು ಆತ ಶತ ಪ್ರಯತ್ನ ನಡೆಸಿದರೂ ಅದು ಅವನಿಗೆ ಲಭಿಸುವುದಿಲ್ಲ. ಆತನಿಗಿಂತ ಶಕ್ತಿಶಾಲಿಯಾದ ಅನೇಕ ವಸ್ತುಗಳ ವಿನಯಶೀಲತೆ ಮತ್ತು ದಾಸ್ಯತನವನ್ನು ಕಂಡು ಆತ ಪ್ರಭಾವಿತನಾಗುತ್ತಾನೆ. ಪರ್ವತಗಳನ್ನು, ಸಮುದ್ರಗಳನ್ನು, ಚಂಡಮಾರುತ ಮತ್ತು ಭೂಖಂಡಗಳನ್ನು ಆತ ನೋಡುತ್ತಾನೆ. ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳು ತಮ್ಮದೇ ಕಕ್ಷೆಯಲ್ಲಿ ಸುತ್ತುವುದನ್ನು ಅವನು ಕಾಣುತ್ತಾನೆ. ಈ ಎಲ್ಲಾ ವಸ್ತುಗಳ ಪ್ರತಾಪಗಳನ್ನು ಕಂಡು ಆತನಿಗೆ ತನ್ನ ದೌರ್ಬಲ್ಯದ ಅರಿವಾಗುತ್ತದೆ.

ಹೀಗೆ ವಿವಿಧ ದೃಶ್ಯಗಳನ್ನು ಮತ್ತು ತನ್ನ ಅಸಹಾಯಕತೆಯನ್ನು ಕಂಡಾಗ ಆತನ ಮನ ಸಹಜವಾಗಿಯೇ ದಾಸ್ಯದ ಕಡೆಗೆ ವಾಲುತ್ತದೆ. ಈ ದಾಸ್ಯ ಪ್ರಜ್ಞೆ ಆತನಲ್ಲಿ ದೇವ ಕಲ್ಪನೆಯನ್ನು ಸೃಷ್ಟಿಸುತ್ತದೆ ಮತ್ತು ಈ ಅಗಾಧ ಶಕ್ತಿಯುಳ್ಳ ವಸ್ತುಗಳ ಒಡೆಯನ ನೆನಪು ಅವನನ್ನು ದೇವನ ಮುಂದೆ ಬಾಗಲು ಮತ್ತು ವಿಧೇಯತೆಯನ್ನು ತೋರಲು ಅವನನ್ನು ನಿರ್ಬಂಧಿಸುತ್ತದೆ.

ಅಜ್ಞಾನದ ಕಸರತ್ತು

ತನಗಿಂತ ಶಕ್ತಿಶಾಲಿಯಾದ ಮತ್ತು ತನಗೆ ಅಲ್ಪ ಲಾಭ ನಷ್ಟಗಳನ್ನು ಒದಗಿಸುವ ವಸ್ತುಗಳನ್ನು ದೇವರು ಎಂದು ಭಾವಿಸುವುದು ಮಾನವನ ಅಜ್ಞಾನದ ಪರಮಾವಧಿಯಾಗಿದೆ. ಆದ್ದರಿಂದಲೇ ಆತ ತನ್ನಂತೆಯೇ ಇರುವ ಮಾನವರನ್ನು, ಪ್ರಾಣಿಗಳನ್ನು, ನದಿಗಳನ್ನು ಪೂಜಿಸುತ್ತಾನೆ. ಅಗ್ನಿ, ಮಳೆ ಮತ್ತು ಸೂರ್ಯನನ್ನು ಆರಾಧಿಸುತ್ತಾನೆ.

ಅನೇಕ ದೇವರ ಕಲ್ಪನೆ

ಈ ಅಜ್ಞಾನವು ತೊಲಗಲು ಆರಂಭವಾದಾಗ, ಮೇಲಿನ ವಸ್ತುಗಳೆಲ್ಲವೂ ತನ್ನಂತೆಯೇ ಅಸಹಾಯಕವಾಗಿವೆ ಎಂದು ಆತನಿಗೆ ಅರಿವಾಗುತ್ತದೆ. ಮಹಾ ಶಕ್ತಿಶಾಲಿ ಪ್ರಾಣಿಗಳು ಸೊಳ್ಳೆಗಳಂತೆಯೇ ಸಾಯುತ್ತವೆ. ನದಿಗಳು ಬತ್ತಿ ಹೋಗುತ್ತವೆ. ಪರ್ವತಗಳನ್ನು ಸ್ವತಃ ಮನುಷ್ಯನೇ ಛಿದ್ರಛಿದ್ರಗೊಳಿಸಿ ಬಿಡುತ್ತಾನೆ. ಭೂಮಿಗೆ ತನ್ನಿಷ್ಟದಂತೆ ಹಿಗ್ಗಲೂ ಕುಗ್ಗಲೂ ಸಾಧ್ಯವಾಗುವುದಿಲ್ಲ. ನೀರಿಲ್ಲದಿದ್ದರೆ ಭೂಮಿ ನಿರ್ಜೀವವಾಗುತ್ತದೆ. ಸೂರ್ಯ, ಚಂದ್ರ, ನಕ್ಷತ್ರಗಳು ಒಂದು ಕಾನೂನಿಗೆ ಅಧೀನವಾಗಿವೆ. ಅವುಗಳಿಗೆ ಅದನ್ನು ಉಲ್ಲಂಘಿಸಲು ಸಾಧ್ಯವಿಲ್ಲ. ಆತನಿಗೆ ಈ ವಾಸ್ತವದ ಅರಿವಾದಾಗ ಆತ ಅದೃಶ್ಯ ಶಕ್ತಿಗಳ ಬಗ್ಗೆ ಚಿಂತಿಸಲು ಆರಂಭಿಸುತ್ತಾನೆ. ಈ ಎಲ್ಲಾ ವಸ್ತುಗಳನ್ನು ನಿಯಂತ್ರಿಸುವ ಮತ್ತು ಅವುಗಳ ಮೇಲೆ ಅಧಿಕಾರವನ್ನು ಚಲಾಯಿಸುವ ಶಕ್ತಿಯ ಬಗ್ಗೆ ಚಿಂತಿಸುತ್ತಾನೆ. ಇಲ್ಲಿಂದ ಅವನಿಗೆ ವಿವಿಧ ದೇವರುಗಳ ಮೇಲೆ ವಿಶ್ವಾಸ ಮೂಡುತ್ತದೆ. ಬೆಳಕು, ಗಾಳಿ ಮತ್ತು ನೀರು, ರೋಗ ಮತ್ತು ಆರೋಗ್ಯ ಮುಂತಾದ ವಸ್ತುಗಳಲ್ಲಿ ಆತ ದೈವಿಕ ಶಕ್ತಿಯನ್ನು ಕಾಣುತ್ತಾನೆ. ಅವುಗಳಿಗೆ ಕಾಲ್ಪನಿಕ ರೂಪ ಕೊಟ್ಟು ಆರಾಧಿಸತೊಡಗುತ್ತಾನೆ.

ಕಾಲ್ಪನಿಕ ಶಿರ್ಕ್

ಮಾನವನಿಗೆ ಜ್ಞಾನ ಪ್ರಾಪ್ತವಾದಾಗ ಈ ಜಗತ್ತಿಗೆ ಓರ್ವ ನಿಯಂತ್ರಕ ಇದ್ದಾನೆ ಮತ್ತು ಈ ಜಗತ್ತು ಅವನ ನಿಯಮಗಳಿಗೆ ವಿಧೇಯವಾಗಿದೆ ಎಂಬ ವಾಸ್ತವಿಕತೆ ತಿಳಿದು ಬರುತ್ತದೆ. ಗಾಳಿ ಬೀಸುವುದು, ಮಳೆ ಸುರಿಯುವುದು, ನಕ್ಷತ್ರಗಳು ಚಲಿಸುವುದು, ಹವಾಮಾನ ಬದಲಾಗುವುದು, ಮಹಾಶಕ್ತಿಗಳು ಶಿಸ್ತುಬದ್ಧವಾಗಿ ಮತ್ತು ಕ್ರಮಬದ್ಧವಾಗಿ ಸಮಯ ಪಾಲನೆ ಯೊಂದಿಗೆ ಪರಸ್ಪರ ಸಹಕರಿಸುತ್ತಾ ಐಕ್ಯದಿಂದ ಕೆಲಸ ಮಾಡುವುದನ್ನು ಆತ ಗಮನಿಸುತ್ತಾನೆ. ಈ ಎಲ್ಲಾ ವ್ಯವಸ್ಥೆಗಳ ಹಿಂದೆ ಒಂದು ಮಹಾನ್ ಶಕ್ತಿಯ ಕೈವಾಡವಿದೆ. ಆ ಶಕ್ತಿಯೇ ಈ ಜಗತ್ತಿನ ಪ್ರಭುವಾದ ಅಲ್ಲಾಹನಾಗಿದ್ದಾನೆ ಎಂಬ ನಿರ್ಧಾರಕ್ಕೆ ಆತ ಬರುತ್ತಾನೆ. ಒಂದು ವೇಳೆ ಈ ವಿಶ್ವದ ನಿಯಂತ್ರಣ ಒಂದಕ್ಕಿಂತ ಹೆಚ್ಚಿನ

ಶಕ್ತಿಗಳ ಕೈಗಳಲ್ಲಿರುತ್ತಿದ್ದರೆ ಈ ಜಗತ್ತೆಂಬ ವ್ಯವಸ್ಥಿತ ಕಾರ್ಖಾನೆ ಅಲ್ಲೋಲ ಕಲ್ಲೋಲವಾಗುತ್ತಿತ್ತು ಎಂಬ ಭಾವನೆ ಆತನ ಮನದಲ್ಲಿ ಮೂಡುತ್ತದೆ. ಆದರೆ ಆ ಮಹಾಶಕ್ತಿಯನ್ನು ಆತ ಭೂಲೋಕದ ರಾಜರುಗಳಂತೆ ಭಾವಿಸುತ್ತಾನೆ. ಅದರ ಸಾಮಿಪ್ಯ ಗಳಿಸಲು ಚಿಕ್ಕಪುಟ್ಟ ದೇವರುಗಳನ್ನು ಸಂತೋಷಗೊಳಿಸಲು ಅವರಿಗೆ ಹರಕೆ ಕಾಣಿಕೆಗಳ ಹೆಸರಲ್ಲಿ ಲಂಚ ಕೊಡಲು ಆರಂಭಿಸುತ್ತಾನೆ.

ಸ್ವಲ್ಪ ಉನ್ನತ ಮಟ್ಟದಲ್ಲಿ ಚಿಂತಿಸುವವರು ಈ ಕಲ್ಪನೆಗಳಿಗಿಂತ ಹೊರತಾದ ಏಕದೇವ ವಿಶ್ವಾಸವನ್ನು ಹೊಂದಿರುತ್ತಾರೆ. ಆದರೆ ಈ ಬಗ್ಗೆ ಅಲ್ಪಜ್ಞಾನ ಅವರಲ್ಲಿಯೂ ಇರುತ್ತದೆ. ಅವರು ವಿಶ್ವಾಸವಿಡುವ ದೇವನಿಗೆ ತಮ್ಮಂತೆಯೇ ಶರೀರವಿದ್ದು ಕುಳಿತಲ್ಲಿಂದಲೇ ತನ್ನ ಅಧಿಕಾರವನ್ನು ನಡೆಸುತ್ತಾನೆ ಎಂದು ಭಾವಿಸುತ್ತಾರೆ. ಅವರಲ್ಲಿ ಕೆಲವರು, ದೇವನು ಮಾನವ ರೂಪತಾಳಿ ಈ ಭೂಮಿಗೆ ಬರುತ್ತಾನೆ ಮತ್ತು ಮಾನವನಂತೆ ಅವನಿಗೂ ಸಂತಾನವಿದೆ ಎಂದು ಭಾವಿಸುತ್ತಾರೆ. ಇನ್ನು ಕೆಲವರು, ಇಹಲೋಕವನ್ನು ದೇವನು ಒಂದು ಕಡೆ ಕೂತು ಯಂತ್ರಗಳ ಮೂಲಕ ನಡೆಸುತ್ತಿದ್ದಾನೆನ್ನುತ್ತಾರೆ. ಮತ್ತೆ ಕೆಲವರು, ದೇವನ ಸಾಮಿಪ್ಯ ಗಳಿಸಬೇಕಾದರೆ ಮಹಾನರ ಮತ್ತು ಪವಿತ್ರಾತ್ಮಗಳ ಶಿಫಾರಸ್ಸಿನ ಅಗತ್ಯವಿದೆ ಎಂದು ಹೇಳುತ್ತಾರೆ. ಹೀಗೆ ಅನೇಕ ವಿಚಾರಗಳು 'ತೌಹೀದ್'ನ (ಏಕದೇವತ್ವದ) ಮಧ್ಯೆ ಮಾನವನ ಹೃದಯದಲ್ಲಿ ಮೂಡಿರುತ್ತದೆ.

ಪ್ರವಾದಿಗಳ ಶಿಕ್ಷಣ ಮತ್ತು ಅದರಿಂದ ವಿಮುಖತೆಯ ಪರಿಣಾಮ

ಈ ಎಲ್ಲ ವಿಚಾರಗಳಿಗಿಂತ ಉನ್ನತವಾದ ಜ್ಞಾನ ಮತ್ತು ಶಿಕ್ಷಣ– ಅದು ಎಲ್ಲ ಕಾಲಗಳಲ್ಲಿಯೂ ದೇಶಗಳಲ್ಲಿಯೂ ಬಂದ ದೇವನ ಸಜ್ಜನ ದಾಸರಾದ, ಇಸ್ಲಾಮಿನ ಪಾರಿಭಾಷಿಕದಲ್ಲಿ ಪ್ರವಾದಿಗಳ ಶಿಕ್ಷಣದಲ್ಲಿದೆ. ಈ ಜ್ಞಾನವು ಜಗತ್ತಿಗೆ ಮೊದಲು ಲಭಿಸಿರುವುದೇ ಆದಿ ಮಾನವ ಮತ್ತು ಪ್ರವಾದಿ ಆದಮ್(ಅ)ರ ಮೂಲಕ. ಆ ಬಳಿಕ ಎಲ್ಲ ಪ್ರವಾದಿಗಳು, ಕೊನೆಯದಾಗಿ ಪ್ರವಾದಿ ಮುಹಮ್ಮದ್(ಸ)ರೂ ಆ ಜ್ಞಾನವನ್ನು ಜಗತ್ತಿಗೆ ಕಲಿಸಲು ಬಂದರು.

ಏಕದೇವತ್ವವನ್ನು ಒಪ್ಪುವವನು ಈ ಪ್ರವಾದಿಗಳ ಶಿಕ್ಷಣದಿಂದ ವಿಮುಖನಾದರೆ ಅಥವಾ ಅಜ್ಞನಾದರೆ, ಆತ ಪ್ರಥಮತಃ ಅಲ್ಲಾಹನನ್ನು

ಏಕೈಕನೆಂದು ಅಂಗೀಕರಿಸುತ್ತಲೇ ಮಿಥ್ಯ ಮತ್ತು ಕಾಲ್ಪನಿಕ ದೇವರ ದಾಸ್ಯದ ಕಡೆಗೆ ತಳ್ಳಲ್ಪಡುತ್ತಾನೆ. ಎರಡನೆಯದಾಗಿ ಆತ ಏಕದೇವ ವಿಶ್ವಾಸದ ನಿಜವಾದ ಹಾಗೂ ಪ್ರಾಯೋಗಿಕ ಬೇಡಿಕೆಗಳಿಂದ ದೂರವಾಗಿ ವಿವಿಧ ರೀತಿಯ 'ಸಿದ್ಧಾಂತ'ಗಳ ಅರಣ್ಯದಲ್ಲಿ ಮರೆಯಾಗುತ್ತಾನೆ. ಕರ್ಮ ಜಗತ್ತಿನಿಂದ ದೂರವಾಗಿ ಆತ್ಮ ಶಾಂತಿಯನ್ನು ಅರಸುತ್ತಾ ಯಾವುದೋ ನಿರ್ಜನ ಪ್ರದೇಶದ ಕಡೆಗೆ ತೆರಳುತ್ತಾನೆ.

ಸರ್ವಧರ್ಮ ಸಮಭಾವ ಸರಿಯಲ್ಲ!

ದೇವನೊಬ್ಬನೇ, ಆತನು ಸರ್ವಶಕ್ತನಾಗಿದ್ದಾನೆ ಎಂದು ವಿಶ್ವಾಸವಿಡುವವರು ಆತನ ಬಳಿಗೊಯ್ಯುವ ಮಾರ್ಗಗಳು ಮಾತ್ರ ಬೇರೆಬೇರೆ ಎಂದು ಭಾವಿಸುತ್ತಾರೆ. 'ದೇವನ ಬಳಿ ಹೋಗುವ' ಕಲ್ಪನೆ, ದೇವನು ಯಾವುದೇ ಶಿಖರದಲ್ಲಿ ವಿರಾಜಮಾನನಾಗಿದ್ದಾನೆ. ಅವನ ಬಳಿ ಹೋಗುವುದು ನಿರ್ದಿಷ್ಟ ಮಾರ್ಗದ ಮೂಲಕವೇ ಆಗಬೇಕೆಂದಿಲ್ಲ. ಯಾವುದೇ ಮಾರ್ಗದ ಮೂಲಕವೂ ಆ ಶಿಖರ ತಲುಪಬಹುದೆಂಬ ಭಾವನೆ ಆತನಲ್ಲಿ ಮೂಡಿಸುತ್ತದೆ. ಆದರೆ ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಇರುವ ನೇರ ರೇಖೆ ಒಂದು ಮಾತ್ರವೆಂಬುದೇ ಸತ್ಯ. ದೇವನು ಸೃಷ್ಟಿಕರ್ತ, ಯಜಮಾನ ಎಂಬ ನೆಲೆಯಲ್ಲಿ ವಿಧಿಕರ್ತನೂ ಆಗಿದ್ದರೆ, ಆ ವಿಧಿಕರ್ತನ ಅನುಸರಣೆಯ ನೇರ ಮಾರ್ಗವೂ ಒಂದೇ ಆಗಿದೆ.

ಧರ್ಮ ಕೇವಲ ವೈಯಕ್ತಿಕ ವಿಚಾರವಲ್ಲ

ದೇವಾನುಸರಣೆ ಮತ್ತು ದೇವಾರಾಧನೆಯು ಮಾನವನ ವೈಯಕ್ತಿಕ ವಿಚಾರವಾಗಿದ್ದು, ವ್ಯಕ್ತಿಯು ತನ್ನ ಇಚ್ಛಾನುಸಾರ ದೇವನನ್ನು ಪೂಜಿಸಿ ಆತನ ಸಂತೃಪ್ತಿಯನ್ನು ಗಳಿಸಬಹುದೆಂದು ಕೆಲವರು ಭಾವಿಸುತ್ತಾರೆ. ಅಂಥವರಿಗೆ ಮಾನವ ಸಮಾಜದೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ. ಅವರು ಮಾನವ ಸಮಾಜವನ್ನು ಶೈತಾನರಿಗೆ ಅರ್ಪಿಸುತ್ತಾರಲ್ಲದೆ, ಸ್ವತಃ ತಮ್ಮ ಸಹೋದರ-ಸಹೋದರಿಯರನ್ನು ನರಕಾಗ್ನಿಗೆ ತಳ್ಳುತ್ತಾರೆ. ಅವರು ದುಃಖ-ದುಮ್ಮಾನಗಳಲ್ಲಿ, ಕಷ್ಟ-ಕಾರ್ಪಣ್ಯಗಳಲ್ಲಿ ಸಿಲುಕಿ ಚಡಪಡಿಸುವುದನ್ನು

ಕಂಡು ತಾವು ಮಾತ್ರ ಮನಃಶಾಂತಿಯನ್ನು ಗಳಿಸಲು ಪ್ರಯತ್ನಿಸುತ್ತಾರೆ. ಇದು ಸ್ವಾರ್ಥವಾಗಿದೆ. ಮಾನವ ಸಮಾಜದಲ್ಲಿ ಇಂತಹ ಸ್ವಾರ್ಥ ಜೀವನ ಸಾಗಿಸುವುದು ಅಸಾಧ್ಯವಾಗಿದೆ. ಒಬ್ಬ ವ್ಯಕ್ತಿ ಒಂದು ಸಮಾಜದ ಭಾಗವಾಗಿದ್ದು ಕೊಂಡು ಅದರ ಆಗುಹೋಗುಗಳಿಂದ ದೂರವಿರಲು ಸಾಧ್ಯವಿಲ್ಲ. ಏಕೆಂದರೆ ವ್ಯಕ್ತಿಯ ಜೀವನದಲ್ಲಿ ಶಾಂತಿ ಸ್ಥಾಪನೆಯಾಗದೆ ಸಮಾಜದಲ್ಲಿ ಶಾಂತಿ ಸ್ಥಾಪನೆಗೊಳ್ಳಲು ಸಾಧ್ಯವಿಲ್ಲ. ಒಂದು ಸಮಾಜ ಶಾಂತಿಯ ಪಥದಲ್ಲಿ ಮುಂದೆ ಸಾಗಿದಾಗ ಮಾತ್ರ ವ್ಯಕ್ತಿಯ ಜೀವನದಲ್ಲಿ ಶಾಂತಿ ಸ್ಥಾಪನೆಗೊಳ್ಳುತ್ತದೆ. ಒಂದು ವೇಳೆ ಒಂದು ಸಮಾಜ ವೈಚಾರಿಕ ಮತ್ತು ವ್ಯಾವಹಾರಿಕ ಸಮಸ್ಯೆಗಳಲ್ಲಿ ಸಿಲುಕಿದರೆ ಅದರಿಂದ ಮುಕ್ತಿ ಪಡೆಯಲು ತನ್ನೆಲ್ಲಾ ಜವಾಬ್ದಾರಿಕೆಗಳಿಂದ ಮುಕ್ತನಾಗಿ ಆತ ಕಾಡುಗಳಲ್ಲಿ ಜೀವಿಸಬೇಕಾಗಿ ಬರಬಹುದು. ಆದರೆ ಆಧುನಿಕ ಕಾಲದಲ್ಲಿ ಅದು ಸಾಧ್ಯವಲ್ಲ.

ದೇವರು ಮತ್ತು ಆರಾಧನೆಗಳನ್ನು ಸಮಾಜ ಮತ್ತು ಅದರ ವ್ಯವಹಾರಗಳಿಂದ ಮುಕ್ತಗೊಳಿಸಿದರೆ, ಧರ್ಮವನ್ನು ಸಮಾಜದಿಂದ ಬೇರ್ಪಡಿಸಿ ಅದು ಮಾನವನ ವೈಯಕ್ತಿಕ ವಿಚಾರ ಎಂದು ಬಗೆದರೆ, ಅದರ ಪರಿಣಾಮ ವೆಂಬಂತೆ ಒಳಿತನ್ನು ಆಶಿಸುವವರು ಕೆಡುಕುಗಳಿಂದ ಹೆದರಿ ತಮ್ಮನ್ನೂ ತಮ್ಮ ಆತ್ಮವನ್ನೂ ಅದರಿಂದ ರಕ್ಷಿಸಲು ಮತ್ತು ಅದರಿಂದ ಮುಕ್ತಿಯನ್ನು ಪಡೆಯಲು ಸಮಾಜದಿಂದಲೇ ದೂರವಾಗುತ್ತಾರೆ. ಆಗ ಸಮಾಜದಲ್ಲಿ ಕೆಡುಕನ್ನು ಸ್ಥಾಪಿಸಲು ಶೈತಾನರಿಗೆ ಮುಕ್ತ ಅವಕಾಶ ದೊರಕುತ್ತದೆ.

ಧಾರ್ಮಿಕತೆ ಮತ್ತು ಲೌಕಿಕತೆಯೆಂಬ ವಿಂಗಡನೆ

ದೇವರು ಮತ್ತು ಧರ್ಮವನ್ನು ಸಮಾಜದಿಂದ ಬೇರ್ಪಡಿಸುವ ಸಿದ್ಧಾಂತ ಗಳಿಂದ ಜೀವನವು ಲೌಕಿಕತೆ–ಧಾರ್ಮಿಕತೆ, ಆಧ್ಯಾತ್ಮಿಕತೆ–ಭೌತಿಕತೆ, ಧಾರ್ಮಿಕ ಜೀವನ ಮತ್ತು ಭೌತಿಕ ಜೀವನ ಎಂದು ವಿಭಜಿಸಲ್ಪಡುತ್ತದೆ. ಇದರಿಂದಾಗಿ ಆರಾಧನಾಲಯಗಳಲ್ಲಿ ದೇವಭಕ್ತ ಮತ್ತು ದೇವನಿಷ್ಠನೊಬ್ಬನು ಲೌಕಿಕ ವಿಚಾರಗಳಲ್ಲಿ ಕಟ್ಟಾ ಭೌತಿಕವಾದಿಯಾಗಿ ಮಾರ್ಪಡುತ್ತಾನೆ. ಮಾತ್ರವಲ್ಲ ಒಬ್ಬ ನಿಜವಾದ ದೇವಭಕ್ತ ಭೌತಿಕ ಜೀವನದ ದುಷ್ಟ ವ್ಯವಹಾರಗಳನ್ನು

ಂಡಿಸಿ ಅದನ್ನು ಸುಧಾರಿಸಲು ಯತ್ನಿಸಿದರೆ, ಜನರು ಈ ದೇವಭಕ್ತನ ಲೌಕಿಕ ಕಾಳಜಿ'ಯನ್ನು ಗೇಲಿ ಮಾಡಲು ಆರಂಭಿಸುತ್ತಾರೆ. ತನ್ನ ಸಹೋದರರ ಂಧಾರಣೆ ಮಾಡಲು ಸಾಧ್ಯವಾಗದ ಮತ್ತು ಮಾನಸಿಕವಾಗಿ ಜರ್ಝರಿತರಾದ ಅವರನ್ನು ಸಂತೃಪ್ತಗೊಳಿಸಲು ಸಾಧ್ಯವಿಲ್ಲದ 'ಒಳಿತು'ಗಳಿಂದ ಏನು ಪ್ರಯೋಜನ? ಸಾವಿರಾರು ಮಂದಿ ಹಸಿವಿನಿಂದ ಬಳಲುತ್ತಿರುವಾಗ ತಾನು ಮಾತ್ರ ಹೊಟ್ಟೆ ತುಂಬಿಸುವುದು ಅಪರಾಧೀ ಕೃತ್ಯವಾದರೆ ಭೌತಿಕತೆಯ ಬಲೆ ಯಲ್ಲಿ ಸಿಲುಕಿ ನರಳುತ್ತಿರುವ ಜನರನ್ನು ಅದೇ ಅವಸ್ಥೆಯಲ್ಲಿ ಬಿಟ್ಟು ತಾನು ಮಾತ್ರ ಮನಃಶಾಂತಿಯನ್ನು ಬಯಸುವುದು ಅಪರಾಧವಾಗಲಾರದೇ?

ಒಬ್ಬ ವ್ಯಕ್ತಿಯಿಂದ ಆತ್ಮ ಮತ್ತು ಶರೀರವನ್ನು ಬೇರ್ಪಡಿಸಲು ಸಾಧ್ಯ ವಿಲ್ಲವೆಂದಾದರೆ ಸಮಾಜ ಮತ್ತು ಅದರ ವ್ಯವಹಾರಗಳ ವಿಂಗಡನೆ ಹೇಗೆ ಸಾಧ್ಯ? ಒಬ್ಬ ವ್ಯಕ್ತಿಯ ದೇಹದಿಂದ ಆತ್ಮವನ್ನು ಬೇರ್ಪಡಿಸಿದರೆ ಆತ ಸಾಯುತ್ತಾನೆಂದಾದರೆ ಸಾಮಾಜಿಕ ಜೀವನದಿಂದ ಆಧ್ಯಾತ್ಮಿಕತೆ, ನೈತಿಕತೆ ಹಾಗೂ ಧರ್ಮ ಮತ್ತು ದೇವರನ್ನು ಬೇರ್ಪಡಿಸಿದರೆ ಅದು ಸಾಯಲಾರದೇ?

ಮೂಲಭೂತ ಪ್ರಶ್ನೆಗಳು

ಒಂದು ಮಹೋನ್ನತ ಅಸ್ತಿತ್ವದ ಮುಂದೆ ತನ್ನ ತಲೆಯನ್ನು ನಮ್ರತೆ ಯಿಂದ ಬಾಗಿಸುವುದು ಮಾನವ ಪ್ರಕೃತಿಯ ಸಹಜ ಬೇಡಿಕೆಯಾಗಿದೆ. ಅದು ಮಾನವ ಜೀವನದ ಆರಂಭದಲ್ಲಿಯೇ ಇತ್ತು ಮತ್ತು ಅದರ ಅಸ್ತಿತ್ವ ಇರುವ ತನಕ ಇರುವುದು.

ದೇವನು ಯಾರು, ಅವನ ಗುಣ ವಿಶೇಷತೆಗಳೇನು, ಮಾನವನ ವಾಸ್ತವಿಕತೆ ಏನು ಮತ್ತು ಅವನ ಸ್ಥಾನಮಾನ ಏನು, ಅವನ ಆರಂಭ ಹೇಗಾಯಿತು, ಅವನ ಕೊನೆ ಹೇಗೆ, ದೇವನೊಂದಿಗೆ ಮಾನವನ ಸಂಬಂಧ ಹೇಗಿರಬೇಕು, ಲೋಕದೊಂದಿಗೆ ಅವನ ಸಂಬಂಧ ಹೇಗಿರಬೇಕು, ಅವನ ಮುಂದಿರಬೇಕಾದ ಉದ್ದೇಶಗಳಾವುವು, ಅವನ ವಿಜಯದ ಪಥ ಯಾವುದು, ಅಲ್ಲಿಗೆ ತಲಪುವ ಮಾರ್ಗಗಳಾವುವು, ಅವನ ಸೋಲು ಯಾವುದರಿಂದ, ಅವನ ನಾಶ ಹೇಗೆ, ಅದಕ್ಕೆ ಕಾರಣಗಳೇನು, ಅದರಿಂದ ರಕ್ಷಣೆ ಹೊಂದುವ

ಬಗೆ ಹೇಗೆ ಎಂದು ಮುಂತಾದ ಪ್ರಶ್ನೆಗಳಿಗೆ ತನ್ನ ಬುದ್ಧಿ ಮತ್ತು ಚಿಂತನಾ ಶಕ್ತಿಯಿಂದ ಮಾನವನಿಗೆ ಉತ್ತರ ಕಂಡು ಹಿಡಿಯಲು ಸಾಧ್ಯವಿಲ್ಲ.

ಈ ಎಲ್ಲಾ ಪ್ರಶ್ನೆಗಳು ಮಾನವನಲ್ಲಿ ಎಲ್ಲ ಕಾಲಗಳಲ್ಲೂ ಉದ್ಭವವಾಗು ತ್ತಿದ್ದುವು. ಈ ಪ್ರಶ್ನೆಗಳಿಗೆ ಆತ ತನ್ನ ಊಹೆಗಳಿಂದ ಹಾಗೂ ತನ್ನ ಸೀಮಿತ ತಿಳುವಳಿಕೆ ಮತ್ತು ಅನುಭವಗಳಿಂದ ಉತ್ತರ ಕಂಡು ಹಿಡಿಯಲು ಪ್ರಯತ್ನಿಸಿದ. ಆತ ಕಂಡು ಹಿಡಿದ ಅಥವಾ ಹಿಡಿಯುವ ಉತ್ತರದಿಂದಲೇ ವಿಶ್ವಕ್ಕೆ ಒಳಿತು ಮತ್ತು ಕೆಡುಕು ನಿರ್ಧರಿತವಾಗುತ್ತದೆ.

ಪ್ರವಾದಿಗಳ ಶಿಕ್ಷಣ

ಈ ಮೂಲಭೂತ ಪ್ರಶ್ನೆಗಳಿಗೆ ಇಸ್ಲಾಮ್ ಅರ್ಥಾತ್ ಜಗತ್ತಿನಾದ್ಯಂತ ಬಂದ ಪ್ರವಾದಿಗಳ ಧರ್ಮವು ಮಾನವರಿಗೆ ಕೊಟ್ಟ ಉತ್ತರ ಹೀಗಿದೆ-

ಜಗತ್ತಿನ ಸೃಷ್ಟಿಕರ್ತ, ಒಡೆಯ, ಪಾಲಕ ಪ್ರಭು, ಆತನ ಸಾಮ್ರಾಜ್ಯದ ಒಂದು ಚಿಕ್ಕ ಭಾಗವಾದ ಭೂಮಿಯಲ್ಲಿ ಮಾನವನನ್ನು ನೆಲೆಗೊಳಿಸಿದನು ಅವನಿಗೆ ಆಲೋಚಿಸುವ ಮತ್ತು ಚಿಂತಿಸುವ ಶಕ್ತಿಯನ್ನು ದಯಪಾಲಿಸಿದನು ಒಳಿತು ಕೆಡುಕುಗಳ ವ್ಯತ್ಯಾಸವನ್ನು ತಿಳಿಸಿದನು. ಅವನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟನು. ಸಂಪಾದನೆಯ ಮತ್ತು ಖರ್ಚು ಮಾಡುವ ಅಧಿಕಾರವನ್ನೂ ನೀಡಿದನು. ಒಂದು ರೀತಿಯ ಸ್ವಯಂ ಆಡಳಿತವನು ನೀಡಿ ಮಾನವನನ್ನು ಈ ಭೂಮಿಯ ಮೇಲೆ ತನ್ನ ಪ್ರತಿನಿಧಿಯನ್ನಾಗಿ ನೇಮಿಸಿದನು. ಈ ಹುದ್ದೆಗೆ ಆತನನ್ನು ನಿಯುಕ್ತಿಗೊಳಿಸುವಾಗ, ನಾನು ನಿನ ಮತ್ತು ಈ ಜಗತ್ತಿನ ಒಡೆಯ, ಆರಾಧ್ಯ ಮತ್ತು ಆಜ್ಞಾಧಿಕಾರಿಯಾಗಿದ್ದೇನೆ ನನ್ನ ಸಾಮ್ರಾಜ್ಯದಲ್ಲಿ ನಿನಗೆ ನಿನ್ನದೇ ಆದ ಆಯ್ಕೆಗಳಿರುವುದಿಲ್ಲ. ಮಾತ್ರವೇ ನೀನು ನನ್ನ ಹೊರತು ಇತರರ ದಾಸನೂ ಅಲ್ಲ ಮತ್ತು ನನ್ನ ಹೊರತ ಯಾರೂ ಅನುಸರಣೆ ಮತ್ತು ದಾಸ್ಯ-ಆರಾಧನೆಗೆ ಅರ್ಹರೂ ಅಲ್ಲ ಎಂದ ಸ್ಪಷ್ಟವಾಗಿ ಸಾರಿದ್ದಾನೆ. ಇಹಲೋಕ ಜೀವನವು ಪರೀಕ್ಷಾ ರಂಗವಾಗಿದೆ ಈ ಜೀವನದ ಬಳಿಕ ಪ್ರತಿಯೊಬ್ಬರಿಗೂ ನನ್ನ ಬಳಿಗೆ ಮರಳಲಿಕ್ಕಿದೆ. ಆಗ ನಾನು ನಿಮ್ಮ ಕರ್ಮಗಳ ವಿಚಾರಣೆ ನಡೆಸಿ ತೀರ್ಪು ನೀಡುವೆನು. ನಿಮ್ಮ

ವಿಜಯಿ ಯಾರು, ಪರಾಜಿತರು ಯಾರು ಎಂದು ಆಗ ತಿಳಿದು ಬರುವುದು. ಆದುದರಿಂದ ನನ್ನನ್ನು ನಿಮ್ಮ ಏಕ ಮಾತ್ರ ಆರಾಧ್ಯ ಹಾಗೂ ಆಜ್ಞಾಧಿಕಾರಿ ಎಂದು ಸ್ವೀಕರಿಸುವುದರಲ್ಲೇ ನಿಮಗೆ ಒಳಿತು ಇದೆ. ನಾನು ತೋರಿದ ಮಾರ್ಗದರ್ಶನದಂತೆ ಲೋಕದಲ್ಲಿ ವ್ಯವಹರಿಸಿರಿ. ಇಹಲೋಕ ಒಂದು ಪರೀಕ್ಷಾ ಗೃಹವೆಂದು ಭಾವಿಸಿ ಆ ದೃಷ್ಟಿಕೋನದಿಂದಲೇ ಜೀವನವನ್ನು ಸಾಗಿಸಿರಿ ಮತ್ತು ನಿಮ್ಮ ಕೊನೆಯ ವಿಜಯವೇ ನಿಮ್ಮ ಜೀವನದ ಮುಖ್ಯ ಉದ್ದೇಶವಾಗಿದೆ. ಇದರ ಹೊರತು ಮಿಕ್ಕೆಲ್ಲಾ ವಿಚಾರಗಳು, ಚಿಂತನೆಗಳು ಸುಳ್ಳಾಗಿವೆ. ನೀವು ನೇರ ಮಾರ್ಗದಲ್ಲಿ ಮುಂದೆ ಸಾಗಿದರೆ ಇಹಲೋಕದಲ್ಲಿ ಶಾಂತಿ–ಸಮಾಧಾನ ಲಭಿಸುವುದು ಮತ್ತು ಪರಲೋಕದಲ್ಲಿ ಶಾಶ್ವತ ಸುಖ ಸಿಗುವುದು. ಒಂದು ವೇಳೆ ನಿಮಗೆ ನೀಡಲಾದ ಅವಕಾಶ ಮತ್ತು ಸ್ವಾತಂತ್ರ್ಯದಿಂದಾಗಿ ನೀವು ದುರ್ಮಾರ್ಗವನ್ನು ಅನುಸರಿಸಿದರೆ, ಇಹಲೋಕ ದಲ್ಲಿ ಕಷ್ಟ ಕಾರ್ಪಣ್ಯ ಮತ್ತು ಸಂಕಟಕ್ಕೆ ಗುರಿಯಾಗುವಿರಿ. ಪರಲೋಕದಲ್ಲಿ ಶಾಶ್ವತ ಶಿಕ್ಷೆಗೆ ಅರ್ಥಾತ್ ನರಕ ಎಂದು ಕರೆಯಲ್ಪಡುವ ಆಳವಾದ ಅಗ್ನಿಕುಂಡಕ್ಕೆ ಹಾಕಲ್ಪಡುವಿರಿ ಎಂದು ದೇವನು ಹೇಳಿದನು.

ಹೀಗೆ ನಿರ್ದೇಶಗಳನ್ನು ನೀಡಿ ಜಗದೊಡೆಯನು ಮಾನವನನ್ನು ಈ ಭೂಮಿಯಲ್ಲಿ ನೆಲೆಗೊಳಿಸಿದ. ಮಾನವಕುಲದ ಪ್ರಥಮ ವ್ಯಕ್ತಿ ಆದಮ್(ಅ)ರಿಗೆ ಈ ನಿರ್ದೇಶಗಳನ್ನೇ ನೀಡಲಾಗಿತ್ತು. ಅದರಂತೆ ಅವರು ಮತ್ತು ಅವರ ಮಕ್ಕಳು ಭೂಮಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ಆದೇಶಿಸಲಾಗಿತ್ತು. ಮಾನವ, ಅಜ್ಞಾನದ ಅಂಧಕಾರದಲ್ಲಿ ಹುಟ್ಟಿದವನಲ್ಲ. ಬದಲಾಗಿ ದೇವನು ಜ್ಞಾನ ಮತ್ತು ಸನ್ಮಾರ್ಗದ ಮೂಲಕ ಅವನ ಜೀವನವನ್ನು ಆರಂಭಿಸಿದ್ದಾನೆ. ಮಾನವರಿಗೆ ಅವರ ನೈಜ ಸ್ಥಾನಮಾನವೇನು ಮತ್ತು ಅವರ ಜೀವನೋದ್ದೇಶವೇನು ಎಂಬುದನ್ನು ಸ್ಪಷ್ಟಗೊಳಿಸಲಾಗಿದೆ. ಅವನಿಗೆ ಕಲಿಸಿಕೊಟ್ಟ ಜೀವನ ಮಾರ್ಗವೇ ಇಸ್ಲಾಮ್. ಆದಿಮಾನವ ಆದಮ್(ಅ) ತಮ್ಮ ಮಕ್ಕಳಿಗೆ ಇದನ್ನೇ ಬೋಧಿಸಿ ಹೋಗಿದ್ದರು. ಆದರೆ ಕಾಲ ಕ್ರಮೇಣ ಜನರು ಈ ನೇರ ಮಾರ್ಗವನ್ನು ಬಿಟ್ಟು ತಮ್ಮದೇ ಆದ ವಕ್ರ ಮಾರ್ಗದಲ್ಲಿ ನಡೆಯಲು ಆರಂಭಿಸಿದರು. ಅವರು ತಮ್ಮ ಅಜ್ಞಾನದಿಂದಾಗಿ ಸನ್ಮಾರ್ಗವನ್ನು

ಮರೆತರು. ಮಾತ್ರವಲ್ಲ, ತಮ್ಮ ಕುತಂತ್ರಗಳಿಂದ ಅದನ್ನು ನಿರ್ನಾಮಗೊಳಿಸಿದರು. ಅವರು ಏಕದೇವೋಪಾಸನೆಯನ್ನು ಬಿಟ್ಟು ಭೂಮ್ಯಾಕಾಶಗಳ ಮಾನವ – ಮಾನವೇತರ, ಕಾಲ್ಪನಿಕ ಮತ್ತು ಭೌತಿಕ ವ್ಯಕ್ತಿಗಳನ್ನು ದೇವನಿಗೆ ಸಹಭಾಗಿಗಳನ್ನಾಗಿ ಮಾಡಿದರು. ದೇವನು ನೀಡಿದ 'ಸತ್ಯ ಜ್ಞಾನ'ದಲ್ಲಿ ವಿವಿಧ ರೀತಿಯ ಕಂದಾಚಾರಗಳನ್ನು ಸೇರಿಸಿ ಅನೇಕ ಮತಗಳನ್ನು ಹುಟ್ಟು ಹಾಕಿದರು. ಅವರು ದೇವನು ರೂಪಿಸಿದ ನ್ಯಾಯಯುತ, ನಾಗರಿಕ, ಸುಸಂಸ್ಕೃತ ಕಾನೂನನ್ನು ಬದಿಗೆ ತಳ್ಳಿ ಭೂಮಿಯ ಮೇಲೆ ಕ್ಷೋಭೆಗಳಿಗೆ ಕಾರಣವಾಗುವ ತಮ್ಮಿಚ್ಛೆಯ ನಿಯಮಗಳನ್ನು ರೂಪಿಸಿದರು.

ದೈವಿಕ ಮಾರ್ಗದರ್ಶನದ ವ್ಯವಸ್ಥೆ

ಪಥಭ್ರಷ್ಟರಾದ ಮಾನವರನ್ನು ಬಲಾತ್ಕಾರವಾಗಿ ನೇರಮಾರ್ಗಕ್ಕೆ ತರುವುದು ಅಥವಾ ಅವರ ಪರೀಕ್ಷಾ ಅವಧಿಯನ್ನು ಮೊಟಕುಗೊಳಿಸಿ ಅವರನ್ನು ನಾಶ ಮಾಡುವುದು, ಮಾನವರಿಗೆ ಇಚ್ಛಾ ಸ್ವಾತಂತ್ರ್ಯವನ್ನು ನೀಡಿದ ದೇವನಿಗೆ ಭೂಷಣವಾಗಿರಲಿಲ್ಲ. ಆದ್ದರಿಂದ ಅವನು ಮಾನವರಿಗೆ ನೀಡಲ್ಪಟ್ಟ ಸೀಮಿತ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಊರ್ಜಿತದಲ್ಲಿಟ್ಟುಕೊಂಡೇ ಅವರ ಮಾರ್ಗದರ್ಶನದ ವ್ಯವಸ್ಥೆಯನ್ನು ಮಾಡಿದನು. ಮಾನವರಿಂದಲೇ ದೇವವಿಶ್ವಾಸಿ, ಸಜ್ಜನ ಮತ್ತು ದೇವನ ವಿಧೇಯ ದಾಸರಾದ ಪಾವನ ವ್ಯಕ್ತಿಗಳನ್ನೇ ಈ ಕಾರ್ಯಕ್ಕಾಗಿ ನಿಯುಕ್ತಿಗೊಳಿಸಿದನು. ಅವರಿಗೆ ಸನ್ಮಾರ್ಗದರ್ಶನ ಮಾಡಿಸಿ ಜೀವನ ವಿಧಾನಗಳನ್ನು ಕಲಿಸಿ ತನ್ನ ಸಂದೇಶವನ್ನೂ ಸತ್ಯ ಜ್ಞಾನವನ್ನೂ ಕೊಟ್ಟು ತನ್ನ ಪ್ರತಿನಿಧಿ ಎಂಬ ನೆಲೆಯಲ್ಲಿ ಮಾನವರನ್ನು ಸರಿದಾರಿಗೆ ಕರೆಯಲು ಅವರನ್ನು ನೇಮಿಸಿದನು.

ಎಲ್ಲ ಪ್ರವಾದಿಗಳ ಧರ್ಮ ಒಂದೇ ಆಗಿತ್ತು!

ಸಾವಿರಾರು ವರ್ಷಗಳಿಂದ ವಿವಿಧ ಜನಾಂಗ ಮತ್ತು ವಿವಿಧ ಪ್ರದೇಶ ಗಳಲ್ಲಿ ಪ್ರವಾದಿಗಳ ಆಗಮನದ ವ್ಯವಸ್ಥೆ ಮಾಡಲಾಗಿತ್ತು. ಅವರೆಲ್ಲರ ಧರ್ಮ ಒಂದೇ ಆಗಿತ್ತು. ಅವರೆಲ್ಲರೂ ಒಂದೇ ಆದರ್ಶದ ವಕ್ತಾರರು ಮತ್ತು ಅವರೆಲ್ಲರ ಧ್ಯೇಯ ಒಂದೇ ಆಗಿತ್ತು. ತಾವು ತಂದ ಆದರ್ಶಕ್ಕನುಸಾರ

ಮಾನವರನ್ನು ಸಂಘಟಿಸಿ ಅಲ್ಲಾಹನ ವಿಧಿಗಳನ್ನು ಪಾಲಿಸುವ ಒಂದು ಸಮಾಜದ ನಿರ್ಮಾಣ ಮತ್ತು ಇಹಲೋಕದಲ್ಲಿ ದೇವನ ಕಾನೂನಿನ ಸ್ಥಾಪನೆ, ದೇವ ವಿರೋಧಿ ಕಾನೂನಿನ ನಿರ್ಮೂಲನೆ- ಇದು ಎಲ್ಲ ಪ್ರವಾದಿಗಳ ಧ್ಯೇಯವಾಗಿತ್ತು. ತಮ್ಮ ತಮ್ಮ ಕಾಲದಲ್ಲಿ ಸರ್ವ ಪ್ರವಾದಿಗಳು ಈ ಧ್ಯೇಯ ಸಾಧನೆಗಾಗಿ ಪ್ರಯತ್ನಿಸಿದರು. ಆದರೆ ಎಲ್ಲ ಕಾಲಗಳಲ್ಲಿಯೂ ಬಹುಸಂಖ್ಯಾತ ಜನರು ಅವರ ವಿರೋಧಿಗಳಾದರು. ಮಾತ್ರವಲ್ಲ, ಪ್ರವಾದಿಗಳ ಅನುಯಾಯಿಗಳ ಪಥಭ್ರಷ್ಟತೆಗೆ ಪ್ರಯತ್ನಿಸಿದರು. ಅವರಲ್ಲಿ ಕೆಲವರು ಪ್ರವಾದಿಗಳ ಸಂದೇಶದಿಂದ ವಿಮುಖರಾದರೆ ಮತ್ತೆ ಕೆಲವರು ದೇವನ ಕಾನೂನಿನಲ್ಲಿ ತಮ್ಮ ವಿಚಾರಗಳನ್ನು ಸೇರಿಸಿ ಕಲಬೆರಕೆ ಮಾಡಿದರು.

ಕೊನೆಯ ಪ್ರವಾದಿ

ಗತ ಪ್ರವಾದಿಗಳು ಮಾಡಿದ ಅದೇ ಕಾರ್ಯವನ್ನು ಪೂರ್ತೀಕರಿಸಲು ಅರೇಬಿಯಾದ ಮರುಭೂಮಿಯಲ್ಲಿ ಜನಿಸಿದ ಮುಹಮ್ಮದ್‌ರು(ಸ) ಕೊನೆಯ ಪ್ರವಾದಿಯಾಗಿ ನೇಮಿಸಲ್ಪಟ್ಟರು. ಸರ್ವ ಮಾನವರು ಮಾತ್ರವಲ್ಲ, ಗತ ಪ್ರವಾದಿಗಳ ಅನುಯಾಯಿಗಳೂ ಅವರ ಸಂಬೋಧಿತರಾಗಿದ್ದಾರೆ. ಎಲ್ಲರನ್ನೂ ನೇರಮಾರ್ಗ ದೆಡೆಗೆ ಆಹ್ವಾನಿಸುವುದು, ಸರ್ವರಿಗೂ ಮಾರ್ಗದರ್ಶನ ಮಾಡುವುದು ಮಾತ್ರವಲ್ಲ, ಈ ಕರೆಯನ್ನು ಸ್ವೀಕರಿಸಿದವರನ್ನು ಸಂಘಟಿಸಿ ಅವರನ್ನು ಮತ್ತು ಅವರ ಮೂಲಕ ಇತರರನ್ನು ಸುಧಾರಿಸುವುದು, ಅದಕ್ಕಾಗಿ ಪ್ರಯತ್ನಿಸುವುದು ಅವರ ಕೆಲಸವಾಗಿದೆ.

ಈ ಕರೆ ಮತ್ತು ಶಿಕ್ಷಣದ ಹೆಸರೇ ಇಸ್ಲಾಮ್. ಈ ಕರೆಯನ್ನು ಅನುಸರಿಸುವವರು ಮತ್ತು ಅದಕ್ಕಾಗಿ ಶ್ರಮಿಸುವವರೇ ಮುಸ್ಲಿಮರಾಗಿದ್ದಾರೆ.

ದೇವ ಮಾರ್ಗದರ್ಶನದ ಪರಿಣಾಮ

ಈ ಬೋಧನೆಯು ಮಾನವನನ್ನು ಎಲ್ಲ ಸೃಷ್ಟಿಗಳಿಗಿಂತ ಶ್ರೇಷ್ಠವಾಗಿಸುತ್ತದೆ. ಮಾತ್ರವಲ್ಲ, ಈ ಮೂಲಕ ಆತನ ಶಿರ ಏಕದೇವನ ಹೊರತು ಇತರ ಯಾರ ಮುಂದೆಯೂ ಬಾಗದಂತೆ ತಡೆಯುತ್ತದೆ. ಅವನು ನಿತ್ಯ ಕಾಣುತ್ತಿರುವ ನದಿ,

ಪರ್ವತ, ಸೂರ್ಯ-ಚಂದ್ರ, ಭೂಮಿ ಮತ್ತು ಪ್ರಾಣಿ ಇತ್ಯಾದಿಗಳಿಗೆ ಹೆದರಿ ಅಥವಾ ಇವುಗಳಿಂದ ಲಭಿಸುವ ತಾತ್ಕಾಲಿಕ ಮತ್ತು ಅಲ್ಪ ಲಾಭಗಳನ್ನು ಮನಗಂಡು ಅವುಗಳಿಗೆ ಶಿರಬಾಗಬಾರದು. ಅವುಗಳೆಲ್ಲ ನಿನ್ನ ಸೇವೆಗಾಗಿವೆ ಎಂಬ ಪ್ರಜ್ಞೆಯನ್ನು ಅದು ಮೂಡಿಸುತ್ತದೆ. ತನ್ನ ಮಹೋನ್ನತ ಶಿರವನ್ನು ತನ್ನದೇ ಸೇಪಕರೆದುರು ಬಾಗಿಸುವುದು ದೇವಧಿಕ್ಕಾರ. ಮಾತ್ರವಲ್ಲ ತನ್ನ ಶಿರದ ಅಪಮಾನವೂ ಆಗಿದೆ. ತನಗೆ ನೀಡಲ್ಪಟ್ಟ ಶಕ್ತಿ-ಸಾಮರ್ಥ್ಯ, ಆಸೆ-ಆಕಾಂಕ್ಷೆಗಳ ಸಹಾಯದಿಂದ 'ಪರಿಪೂರ್ಣ ಮಾನವನ' ಅತ್ಯುನ್ನತ ಮಟ್ಟಕ್ಕೇರಬೇಕೇ ಹೊರತು, ಅವುಗಳ ಸೇವೆಯನ್ನು ತನ್ನ ಜೀವನದ ಪರಮ ಗುರಿಯನ್ನಾಗಿಸಿ ಅವುಗಳ ಪ್ರಾಪ್ತಿಗೆ ಭೌತಿಕತೆಯ ಅರಣ್ಯದಲ್ಲಿ ಅಲೆದಾಡುವುದು ನಿನಗೆ ಭೂಷಣವಲ್ಲ ಎಂಬುದನ್ನು ಕೂಡಾ ಅದು ಬೋಧಿಸುತ್ತದೆ.

ಈ ಶಿಕ್ಷಣವನ್ನು ಅಂಗೀಕರಿಸಿದರೆ, ಹುಗಿಯಲ್ಪಟ್ಟ ಆತನ ಸ್ವಾಭಿಮಾನ ಮತ್ತು ಸುಪ್ತವಾಗಿರುವ ಆತನ ಶಕ್ತಿ ಸಾಮರ್ಥ್ಯಗಳು ಎಚ್ಚರಗೊಳ್ಳುತ್ತವೆ. ಮತ್ತೆಂದೂ ಆತನ ಶಿರ ಯಾವುದೇ ಸೃಷ್ಟಿಯ ಮುಂದೆ ಬಾಗುವುದಿಲ್ಲ. ಆತ ತನ್ನ ಕೈಯನ್ನು ಯಾರ ಮುಂದೆಯೂ ಚಾಚುವುದಿಲ್ಲ. ಆತನಲ್ಲಿ ದೃಷ್ಟಿ ಮತ್ತು ಹೃದಯ ವೈಶಾಲ್ಯ ಉಂಟಾಗುತ್ತದೆ. ಆತ ಎಂದೂ ತನ್ನಲ್ಲಿರುವ ಸಾಮರ್ಥ್ಯಕ್ಕಾಗಿ ಮತ್ತು ತನ್ನ ಸಾಧನೆಗಳಿಗಾಗಿ ಅಹಂಕಾರ ಪಡುವುದಿಲ್ಲ. ಏಕೆಂದರೆ ಇದೆಲ್ಲವನ್ನೂ ದಯಪಾಲಿಸಿದವನೇ ಹೊಗಳಿಕೆಗೆ ಅರ್ಹ ಎಂಬ ಸತ್ಯಪ್ರಜ್ಞೆ ಆತನಲ್ಲಿ ಮೂಡಿರುತ್ತದೆ. ಈ ಸತ್ಯಪ್ರಜ್ಞೆಗಳು(ವಿಶ್ವಾಸ), ಹೃದಯ ಶುದ್ಧಿ ಮತ್ತು ಸತ್ಕರ್ಮಗಳಿಂದ ಮಾತ್ರ ಮಾನವ ವಿಜಯಿಯಾಗುತ್ತಾನೆ ಎಂಬ ವಾಸ್ತವಿಕತೆಯನ್ನು ಆತನಲ್ಲಿ ಮೂಡಿಸುತ್ತದೆ. ಈ ವಿಶ್ವಾಸ ಅವನನ್ನು ಪರಾವಲಂಬನೆಯಿಂದ ರಕ್ಷಿಸುತ್ತದೆ. ಮಾತ್ರವಲ್ಲ ದುರಾಸೆ, ದುಷ್ಕೃತ್ಯ ಮತ್ತು ಮತ್ಸರಗಳಂತಹ ನೀಚ ಗುಣಗಳಿಂದ ಆತನ ಮನ-ಮಸ್ತಿಷ್ಕವನ್ನು ಶುದ್ಧಗೊಳಿಸುತ್ತದೆ. ಅದು ಆತನನ್ನು ಎಂದೂ ನಿರಾಶಾವಾದಿಯನ್ನಾಗಿ ಮಾಡುವುದಿಲ್ಲ. ಏಕೆಂದರೆ ಆತ ವಿಶ್ವಾಸವಿರಿಸಿದ ಪ್ರಭು ಭೂಮ್ಯಾಕಾಶಗಳ ಸರ್ವ ಖಜಾನೆಗಳ ಒಡೆಯನಾಗಿದ್ದಾನೆ. ಆತನ ಕೃಪೆ ಸದಾ ನನ್ನ ಮೇಲೆ ಇದೆ ಎಂಬ ದೃಢ ವಿಶ್ವಾಸ ಜಗತ್ತಿನಲ್ಲಿ ಆತನನ್ನು ಮಹತ್ಕಾರ್ಯಗಳನ್ನು

ಮಾಡಲು ಪ್ರೇರೇಪಿಸುತ್ತದೆ.

ಈ ವಿಶ್ವಾಸದ ಆಧಾರದಲ್ಲಿ ರೂಪಿಸಲ್ಪಟ್ಟ ವ್ಯಕ್ತಿಗಳಿಂದ ಕೂಡಿದ ಸಮಾಜ ಒಂದು 'ಪರಿಪೂರ್ಣ ಜೀವನ'ವನ್ನು ಸಾಗಿಸುತ್ತದೆ. ಈ ಸಮಾಜ ಎಂದೂ ಜೀವನವನ್ನು ವಿಭಜಿಸುವುದಿಲ್ಲ. ತಮ್ಮ ಜೀವನದ ಕೆಲವು ರಂಗಗಳಲ್ಲಿ ದೇವ ಕಾನೂನನ್ನು ಅನುಸರಿಸಿ ಮಿಕ್ಕುಳಿದ ರಂಗಗಳಲ್ಲಿ ಅದನ್ನು ನಿರಾಕರಿಸುವುದಿಲ್ಲ. ಮಾತ್ರವಲ್ಲ, ಆರಾಧನಾಲಯಗಳಲ್ಲಿ ಮತ್ತು ಧಾರ್ಮಿಕ ಕ್ಷೇತ್ರದ ಸೀಮಿತ ಮಿತಿಯೊಳಗೆ ಮಾತ್ರ ಪ್ರಭುವಿನ ಅನುಸರಣೆ ಮಾಡುವುದು, ಉಳಿದ ಎಲ್ಲ ರಂಗಗಳ ವ್ಯವಹಾರದಲ್ಲಿ ತನ್ನಿಚ್ಛೆಯಂತೆ ನಡೆದುಕೊಳ್ಳುವುದು ಅಥವಾ ತಮ್ಮಂತೆಯೇ ಇತರ ಮನುಷ್ಯರಿಗೆ ಅರ್ಪಿಸುವುದು– ಇಂತಹ ವೈರುಧ್ಯಗಳು ಅವರಲ್ಲಿ ಕಾಣಸಿಗುವುದಿಲ್ಲ.

ನೈಜ ವಿಜಯ

ಆದರೆ ಈ ಶಿಕ್ಷಣ ಮತ್ತು ಮಾರ್ಗದರ್ಶನ ಕೇವಲ ಮಾನವನ ಐಹಿಕ ಜೀವನದ ಸಂಕಷ್ಟಗಳಿಂದ ಪಾರುಗೊಳಿಸುವ ಮತ್ತು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಗುಣಾತ್ಮಕ ಔಷಧಿಯಲ್ಲ. ಬದಲಾಗಿ ಇದು ಮಾನವರನ್ನು ಇಹ–ಪರಗಳ ಸಕಲ ಸಮಸ್ಯೆಗಳಿಂದ ಮತ್ತು ನಾಶ–ನಷ್ಟಗಳಿಂದ ರಕ್ಷಿಸುತ್ತದೆ. ಇದನ್ನು ಮನಗಾಣದ ಗತ ಸಮುದಾಯಗಳು ಅನುಭವಿಸಿರುವ ಅಪಮಾನಗಳು, ಚರಿತ್ರೆಯ ಅಧ್ಯಯನಗಳಿಂದ ನಮಗೆ ತಿಳಿದು ಬರುತ್ತದೆ. ಈ ಶಿಕ್ಷಣ ಮತ್ತು ಮಾರ್ಗದರ್ಶನದಂತೆ ಬದುಕನ್ನು ಬದಲಿಸಿದ ಮಾನವರ ಜೀವನದಲ್ಲಿ ಸಮೃದ್ಧಿ ಬಂದಿತು. ಅವರ ಯಾವುದೇ ಸಮಸ್ಯೆ ಪರಿಹಾರವಾಗದೇ ಉಳಿಯಲಿಲ್ಲ. ಮಾತ್ರವಲ್ಲ ಅಂತಹವರ ಪಾಲಿಗೆ ಈ ಲೋಕವೇ ಸ್ವರ್ಗವಾಗಿ ಪರಿಣಮಿಸಿತು. ಈ ಅನುಭವಗಳಿಂದ ಸ್ಪಷ್ಟವಾಗುವುದೇನೆಂದರೆ, ಈ ಶಿಕ್ಷಣವು ವಾಸ್ತವಿಕತೆಯ ಪರದೆಯನ್ನು ಸರಿಸಿದಾಗಲೇ ಅವು ಜಗತ್ತಿನ ಅತಿ ದೊಡ್ಡ ವಾಸ್ತವಿಕತೆಗಳು ಎಂಬುದು ತಿಳಿದು ಬಂತು.

❖ ❖ ❖ ❖

ಪರಧರ್ಮ ಸಹಿಷ್ಣುತೆ

ಒಂದು ವಸ್ತುವನ್ನು ಒಬ್ಬನು ಕಪ್ಪು, ಇನ್ನೊಬ್ಬ ಬಿಳಿ, ಮತ್ತೊಬ್ಬ ಹಳದಿ, ಮಗದೊಬ್ಬ ಕೆಂಪೆಂದು ಹೇಳಿದರೆ– ಆ ನಾಲ್ವರೂ ಸತ್ಯವಂತರೆಂದು ಹೇಳಲು ಸಾಧ್ಯವಿಲ್ಲ ತಾನೇ. ಒಂದು ವೇಳೆ ಒಂದು ಕಾರ್ಯವನ್ನು ಒಬ್ಬನು ಕೆಟ್ಟದೆಂದು ಹೇಳುವಾಗ, ಇನ್ನೊಬ್ಬ ಒಳ್ಳೆಯದೆಂದರೆ, ಒಬ್ಬನು ಅದರಿಂದ ತಡೆಯುವಾಗ, ಇನ್ನೊಬ್ಬ ಅದರ ಆದೇಶ ನೀಡುತ್ತಾನೆಂದಾದರೆ, ಏಕಕಾಲಕ್ಕೆ ಇಬ್ಬರ ಅಭಿಪ್ರಾಯಗಳೂ ಸರಿಯೆಂದೋ ಇಬ್ಬರೂ ಸತ್ಯವಂತರೆಂದೋ ವಿಧಿ–ನಿಷೇಧಗಳ ಸ್ಪಷ್ಟ ಭಿನ್ನಾಭಿಪ್ರಾಯಗಳಿದ್ದೂ ಇಬ್ಬರ ನಿಲುವೂ ಸರಿಯೆಂದೋ ಹೇಳುವುದು ಅಸಾಧ್ಯ. ಇಂತಹ ಪರಸ್ಪರ ವಿರುದ್ಧ ಹೇಳಿಕೆಗಳನ್ನು ದೃಢೀಕರಿಸಿ ಅದನ್ನು ಸತ್ಯವೆಂದು ಒಬ್ಬನು ಸಾರುತ್ತಾನೆಂದಾದರೆ, ಒಂದೋ ಆತ ಎಲ್ಲರನ್ನೂ ಸಂತುಷ್ಟಗೊಳಿಸ ಬಯಸುತ್ತಾನೆ ಅಥವಾ ಸಮಸ್ಯೆಯ ಬಗ್ಗೆ ಸರಿಯಾಗಿ ವಿವೇಚಿಸದೆ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾನೆ ಎಂದರ್ಥ. ಎರಡೂ ಅವಸ್ಥೆಗಳು ಬುದ್ಧಿ ಮತ್ತು ಸತ್ಯಕ್ಕೆ ವಿರುದ್ಧವಾಗಿವೆ. ಪರಸ್ಪರ ವ್ಯತಿರಿಕ್ತ ಅಭಿಪ್ರಾಯಗಳಿರುವ ವ್ಯಕ್ತಿಗಳನ್ನು ದೃಢೀಕರಿಸುವುದು ಓರ್ವ ವಿವೇಕಿಯಾದ ಸತ್ಯಪ್ರಿಯ ವ್ಯಕ್ತಿಗೆ ಭೂಷಣವಲ್ಲ.

ಸಾಮಾನ್ಯವಾಗಿ, ಜನರು ಹತ್ತಾರು ವಿಧದ ಅಭಿಪ್ರಾಯಗಳನ್ನು ಹೊಂದಿದ ಜನರ ವಿವಿಧ ಹಾಗೂ ತದ್ವಿರುದ್ಧ ಅಭಿಪ್ರಾಯಗಳನ್ನು ಸರಿಯೆಂದು ಒಪ್ಪಿಕೊಳ್ಳುವುದು 'ಸಹಿಷ್ಣುತೆ'ಯಾಗಿದೆ ಎಂಬ ತಪ್ಪಭಿಪ್ರಾಯವನ್ನು ಹೊಂದಿದ್ದಾರೆ. ವಸ್ತುತಃ ಇದು ನಿಜಾರ್ಥದಲ್ಲಿ ಸಹಿಷ್ಣುತೆಯಲ್ಲ,

ಕಾಪಟ್ಯವಾಗಿದೆ. ವಾಸ್ತವದಲ್ಲಿ ಯಾರ ವಿಶ್ವಾಸ–ಕರ್ಮವು ನಮ್ಮ ದೃಷ್ಟಿಯಲ್ಲಿ ತಪ್ಪಾಗಿರುವುದೋ ಅದನ್ನು ಸಹಿಸುವುದು, ಅವರ ಭಾವನೆಗಳನ್ನು ಪರಿಗಣಿಸುತ್ತಾ ಅವರ ಮನ ನೋಯುವಂತಹ ಟೀಕೆಗಳನ್ನು ಮಾಡದಿರುವುದು, ಅವರು ತಮ್ಮ ವಿಶ್ವಾಸವನ್ನು ತೊರೆಯಲು ಅಥವಾ ತಮ್ಮ ಕರ್ಮಗಳಿಂದ ದೂರವಿರಲು ಯಾವುದೇ ರೀತಿಯ ಬಲವಂತದ ಮಾರ್ಗವನ್ನು ಅನುಸರಿಸದಿರುವುದು ಸಹಿಷ್ಣುತೆಯಾಗಿದೆ.

ಈ ರೀತಿಯ ಸಹಿಷ್ಣುತೆ (ಸಹನೆ) ಮತ್ತು ಈ ಪ್ರಕಾರ ಜನರ ವಿಶ್ವಾಸ–ಕರ್ಮಗಳ ಸ್ವಾತಂತ್ರ್ಯವನ್ನು ಮಾನ್ಯ ಮಾಡುವುದು – ಒಂದು ಪುಣ್ಯ ಕಾರ್ಯ ಮಾತ್ರವಲ್ಲ, ಬದಲಾಗಿ ವಿವಿಧ ಅಭಿಪ್ರಾಯಗಳನ್ನು ಹೊಂದಿರುವ ಜನರಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕೂಡ ಆಗಿದೆ. ಆದರೆ ಒಂದು ವೇಳೆ ನಾವು ಒಂದು ವಿಶ್ವಾಸವನ್ನು ಹೊಂದಿದ್ದಾಗಿಯೂ ಕೇವಲ ಇತರರನ್ನು ಸಂತುಷ್ಟ ಗೊಳಿಸುವ ಸಲುವಾಗಿ ಅವರ ವಿವಿಧ ವಿಶ್ವಾಸಗಳನ್ನು ಸರಿಯೆಂದು ಒಪ್ಪಿದರೆ ಮತ್ತು ಒಂದು ಕರ್ಮ ಪದ್ಧತಿಯ ಅನುಯಾಯಿಗಳಾಗಿದ್ದುಕೊಂಡು ಇತರ ಅನೇಕ ಕರ್ಮ ಪದ್ಧತಿಗಳನ್ನು ಅನುಸರಿಸುವವರಲ್ಲಿ– 'ನೀವೆಲ್ಲರೂ ಸತ್ಯದಲ್ಲಿದ್ದೀರಿ' ಎಂದು ಹೇಳಿದರೆ, ಈ ಸೋಗಲಾಡಿತನದ ಅಭಿಪ್ರಾಯ ಪ್ರಕಟಣೆಯನ್ನು ಸಹಿಷ್ಣುತೆ ಎನ್ನಲು ಖಂಡಿತ ಸಾಧ್ಯವಿಲ್ಲ. ವ್ಯಾವಹಾರಿಕವಾಗಿ ಮೌನ ತಾಳುವುದಕ್ಕೂ ಉದ್ದೇಶಪೂರ್ವಕ ಸುಳ್ಳು ಹೇಳುವುದಕ್ಕೂ ವ್ಯತ್ಯಾಸವಂತೂ ಇರಲೇ ಬೇಕಲ್ಲವೇ.

"ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರನ್ನು ತೆಗಳಬೇಡಿರಿ. ಇದರಿಂದ ಅವರು ಬಹುದೇವಾರಾಧನೆಗಿಂತಲೂ ಮುಂದುವರಿದು ಅಜ್ಞಾನದಿಂದ ಅಲ್ಲಾಹನನ್ನು ತೆಗಳತೊಡಗುವರು. ನಾವು ಇದೇ ರೀತಿಯಲ್ಲಿ ಪ್ರತಿಯೊಂದು ಸಮುದಾಯಕ್ಕೆ ಅದರ ಕರ್ಮವನ್ನು ಚೆಲುವಾಗಿಸಿದ್ದೇವೆ. ಅನಂತರ ಅವರಿಗೆ ತಮ್ಮ ಪ್ರಭುವಿನ ಕಡೆಗೇ ಮರಳಿ ಸಾಗಲಿಕ್ಕಿದೆ. ಆಗ ಅವನು ಅವರೇನು ಮಾಡುತ್ತಿದ್ದರೆಂಬುದನ್ನು ಅವರಿಗೆ ತೋರಿಸಿ ಕೊಡುವನು." (ಅಲ್ ಅನ್‌ಆಮ್: 108)

"(ರಹ್ಮಾನನ ದಾಸರು) ಸುಳ್ಳಿಗೆ ಸಾಕ್ಷಿಗಳಾಗುವುದಿಲ್ಲ[1] ಮತ್ತು ಅವರಿಗೆ ವ್ಯರ್ಥ ವಿಷಯಗಳ ಸಮೀಪದಿಂದ ಹಾದುಹೋಗಬೇಕಾಗಿ ಬಂದಾಗ ಸಂಭಾವಿತರಂತೆ ಹಾದು ಹೋಗುತ್ತಾರೆ." **(ಅಲ್ ಫುರ್ಕಾನ್: 72)**

"ಹೇಳಿ ಬಿಡಿರಿ! ಓ ಸತ್ಯನಿಷೇಧಿಗಳೇ, ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ."
(ಅಲ್ ಕಾಫಿರೂನ್: 1–6)

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ."
(ಅಲ್ ಬಕರ: 256)

"...ಇವರು ಕೆಡುಕುಗಳನ್ನು ಒಳಿತಿನಿಂದ ದೂರೀಕರಿಸುತ್ತಾರೆ. ನಾವು ಇವರಿಗೆ ನೀಡಿರುವುದರಿಂದ ಖರ್ಚು ಮಾಡುತ್ತಾರೆ. ಇವರು ಅಸಂಗತ ಮಾತನ್ನು ಕೇಳಿದಾಗ, 'ನಮ್ಮ ಕರ್ಮ ನಮಗೆ, ನಿಮ್ಮ ಕರ್ಮ ನಿಮಗೆ, ನಿಮಗೆ ಸಲಾಮ್. ತಿಳಿಗೇಡಿಗಳಂತೆ ವರ್ತಿಸಲು ನಾವು ಸಿದ್ಧರಿಲ್ಲ' ಎನ್ನುತ್ತಾ ದೂರ ಸರಿದು ಬಿಟ್ಟರು." **(ಅಲ್ ಕಸಸ್: 54–55)**

"ಆದುದರಿಂದ ಸಂದೇಶವಾಹಕರೇ, ನೀವಿನ್ನು ಅದೇ ಧರ್ಮದ ಕಡೆಗೆ ಕರೆ ನೀಡಿರಿ ಮತ್ತು ನಿಮಗೆ ಆಜ್ಞಾಪಿಸಲಾಗಿರುವ ಪ್ರಕಾರ ಅದರಲ್ಲೇ ಸ್ಥಿರವಾಗಿರಿ. ಇವರ ಇಚ್ಛೆಗಳನ್ನು ಅನುಸರಿಸಬೇಡಿರಿ ಮತ್ತು ಇವರೊಡನೆ

1. ಸತ್ಯಕ್ಕೆ ವಿರುದ್ಧವಾದ ಪ್ರತಿಯೊಂದು ಕರ್ಮವೂ ಸುಳ್ಳಾಗಿದೆ. ಎಲ್ಲೆಲ್ಲಾ ಶಿರ್ಕ್‌ಗೆ ಸಂಬಂಧಿಸಿದ ಕಾರ್ಯ ನಡೆಯುತ್ತದೋ, ದೇವಧಿಕ್ಕಾರಿ ಅಭಿಪ್ರಾಯ ಪ್ರಕಟವಾಗುತ್ತದೋ, ಅಶ್ಲೀಲ–ನಿರ್ಲಜ್ಜೆಯು ರಾಜಾರೋಷವಾಗಿ ನಡೆಯುತ್ತದೋ, ದೌರ್ಜನ್ಯ ಮತ್ತು ದುರಾಚಾರ ನಡೆಯುತ್ತದೋ ಅಲ್ಲೆಲ್ಲಾ ಮಿಥ್ಯವೇ ರಾರಾಜಿಸುತ್ತದೆ. ಎಲ್ಲಿ ಮಾನವನನ್ನು ಅಥವಾ ಇತರ ಜೀವಿಯನ್ನು ದೇವನನ್ನಾಗಿ ಮಾಡಿ ಮಾನವರು ಅವರ ಆರಾಧನೆ ನಡೆಸುತ್ತಾರೋ ಅಲ್ಲಿ ಮಿಥ್ಯದ ಹೊರತು ಬೇರೇನೂ ಇರದು. ಇದು ಮಿಥ್ಯದ ವಿಸ್ತೃತ ವ್ಯಾಖ್ಯಾನವಾಗಿದೆ. ಈ ಮಿಥ್ಯದ ಸಾಕ್ಷಿಯಾಗದಿರುವುದೆಂದರೆ, ಸತ್ಯವಿಶ್ವಾಸಿಯು ಅಂತಹ ಸ್ಥಳಗಳಿಗೆ ಉದ್ದೇಶಪೂರ್ವಕವಾಗಿ ಹೋಗಲಾರ, ಅಂತಹ ಕೃತ್ಯಗಳನ್ನು ನೋಡಲಾರ ಅಥವಾ ಅದಕ್ಕೆ ಸಾಕ್ಷಿಯಾಗಲಾರ.

ಹೀಗೆ ಹೇಳಿರಿ– ಅಲ್ಲಾಹನು ಅವತೀರ್ಣಗೊಳಿಸಿದ ಪ್ರತಿಯೊಂದು ಗ್ರಂಥದ ಮೇಲೆ ನಾನು ವಿಶ್ವಾಸವಿರಿಸಿದೆನು. ನಿಮ್ಮ ನಡುವೆ ನ್ಯಾಯ ಪಾಲಿಸಬೇಕೆಂದು ನನಗೆ ಆದೇಶಿಸಲಾಗಿದೆ. ಅಲ್ಲಾಹನೇ ನಮ್ಮ ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ನಮ್ಮ ಕರ್ಮಗಳು ನಮಗೆ, ನಿಮ್ಮ ಕರ್ಮಗಳು ನಿಮಗೆ. ನಮ್ಮ ನಿಮ್ಮೊಳಗೆ ಯಾವ ಕಲಹವೂ ಇಲ್ಲ. ಅಲ್ಲಾಹನು ಒಂದು ದಿನ ನಮ್ಮೆಲ್ಲರನ್ನು ಒಟ್ಟುಗೂಡಿಸುವನು ಮತ್ತು ಎಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ." (ಅಶ್ಶೂರಾ: 15)

"ಓ ಪೈಗಂಬರರೇ, ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ." (ಅನ್ನಹ್ಲ್: 125)

ಇದುವೇ ಓರ್ವ ದೇವಭಕ್ತ, ಸತ್ಯವಂತ ಮತ್ತು ಸಭ್ಯ ವ್ಯಕ್ತಿ ಅನುಸರಿಸುವ ಸಹಿಷ್ಣುತೆಯಾಗಿದೆ. ಆತ ಯಾವ ಕರ್ಮವಿಧಾನವನ್ನು ಸರಿಯೆಂದು ಭಾವಿಸುತ್ತಾನೋ ಅದರಲ್ಲಿ ಸ್ಥಿರವಾಗಿರುತ್ತಾನೆ. ತನ್ನ ವಿಶ್ವಾಸವನ್ನು ಸ್ಪಷ್ಟವಾಗಿ ಘೋಷಿಸುತ್ತಾನೆ, ಇತರರನ್ನೂ ಈ ವಿಶ್ವಾಸದೆಡೆಗೆ ಆಹ್ವಾನಿಸುತ್ತಾನೆ. ಆದರೆ ಆತ ಯಾರ ಮನಸ್ಸನ್ನೂ ನೋಯಿಸಲಾರ, ಯಾರೊಂದಿಗೂ ಕೆಟ್ಟದಾಗಿ ವರ್ತಿಸಲಾರ, ಯಾರದೇ ವಿಶ್ವಾಸಗಳ ಮೇಲೆ ಆಕ್ರಮಣ ಮಾಡಲಾರ, ಯಾರದೇ ಆರಾಧನಾ ಕರ್ಮಗಳಿಗೆ ಆತಂಕವೊಡ್ಡಲಾರ, ಯಾರನ್ನೂ ಬಲವಂತವಾಗಿ ತನ್ನ ವಿಶ್ವಾಸಕ್ಕೆ ಸೇರಿಸುವ ಪ್ರಯತ್ನವೆಸಗಲಾರ.

ಇನ್ನುಳಿದಂತೆ, ಸತ್ಯವನ್ನು ಸತ್ಯವೆಂದರಿತೂ ಸತ್ಯವೆನ್ನದಿರುವುದು ಅಥವಾ ಮಿಥ್ಯವನ್ನು ಮಿಥ್ಯವೆಂದರಿತೂ ಅದನ್ನು ಸತ್ಯವೆನ್ನುವುದು ಓರ್ವ ಸತ್ಯವಂತ ವ್ಯಕ್ತಿಯ ಲಕ್ಷಣವಲ್ಲ. ವಿಶೇಷತಃ ಜನರನ್ನು ಸಂತುಷ್ಟಗೊಳಿಸಲು ಈ ರೀತಿ ವರ್ತಿಸುವುದಂತೂ ಅತ್ಯಂತ ಅರೋಚಕವಾದ ಮುಖಸ್ತುತಿಯಾಗಿದೆ. ಇಂತಹ ಮುಖಸ್ತುತಿಯು ನೈತಿಕ ನೆಲೆಯಲ್ಲಿ ನೀಚ ಕಾರ್ಯವಾಗಿರುವುದು ಮಾತ್ರವಲ್ಲ, ವ್ಯಕ್ತಿಯು ಇಷ್ಟು ಕೀಳ್ಮಟ್ಟಕ್ಕಿಳಿಯಲುದ್ಯುಕ್ತವಾದಂತಹ ಉದ್ದೇಶವೂ ಈಡೇರಲಾರದು. ಕುರ್‌ಆನ್ ಸ್ಪಷ್ಟವಾಗಿ ಹೀಗೆ ವಿಧಿಸಿದೆ–

"ಯಹೂದಿಯರೂ ಕ್ರೈಸ್ತರೂ– ನೀವು ಅವರ ಮಾರ್ಗವನ್ನು ಅನುಸರಿಸುವ ವರೆಗೂ ನಿಮ್ಮ ಬಗ್ಗೆ ಎಂದೂ ಪ್ರಸನ್ನರಾಗಲಾರರು. ಅಲ್ಲಾಹ್ ತೋರಿಸಿದ ಮಾರ್ಗದರ್ಶನವೇ ವಾಸ್ತವಿಕ ಮಾರ್ಗದರ್ಶನವೆಂದು ಸ್ಪಷ್ಟವಾಗಿ ಹೇಳಿಬಿಡಿರಿ. ನಿಮ್ಮ ಬಳಿಗೆ ಬಂದಿರುವ ದಿವ್ಯಜ್ಞಾನದ ಬಳಿಕವೂ ನೀವು ಅವರ ಚಿತ್ತಾಕಾಂಕ್ಷೆಗಳನ್ನನುಸರಿಸಿದರೆ ಅಲ್ಲಾಹನ ಹಿಡಿತದಿಂದ ನಿಮ್ಮನ್ನು ರಕ್ಷಿಸಲು ಯಾವನೊಬ್ಬ ರಕ್ಷಕ ಮಿತ್ರನಾಗಲಿ ಸಹಾಯಕನಾಗಲಿ ನಿಮಗೆ ಇರಲಾರನು." (ಅಲ್ ಬಕರ: 120)

ಮಿಥ್ಯ ಸಹಿಷ್ಣುತೆಯ ಪ್ರಕಟನೆಯಂತೂ ರಾಜಕೀಯ ಉದ್ದೇಶಗಳಿಗಾಗಿರುತ್ತದೆ. ಇಂದಿನ ಯುಗದ ಮಟ್ಟಿಗೆ ಅದು ಧರ್ಮಸಮ್ಮತವೂ ಆಗಿದೆ. ಏಕೆಂದರೆ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳಿಂದ ರಾಜಕೀಯವು ನೈತಿಕತೆಯಿಂದ ಬೇರ್ಪಟ್ಟು ಬಹಳ ಕಾಲ ಸಂದಿದೆ. ಆದರೆ, ಯಾವುದೇ ವಿವೇಚನೆ– ಚಿಂತನೆ ನಡೆಸದೆ ತಮ್ಮ ಧಾರ್ಮಿಕ ಸಂಶೋಧನೆಯ ವಿಚಿತ್ರ ದೃಷ್ಟಿಕೋನದಿಂದಾಗಿ ಎಲ್ಲಾ ಧರ್ಮಗಳೂ ಸತ್ಯವೇ ಆಗಿದೆಯೆಂಬ ಅಭಿಪ್ರಾಯ ತಾಳುವಂತಹ ತತ್ವಜ್ಞಾನಿಗಳ ಅವಸ್ಥೆಯು ಅತ್ಯಂತ ಖೇದಕರವಾಗಿದೆ. ಇಂತಹ ಮಾತುಗಳು ಸಾಮಾನ್ಯವಾಗಿ, 'ನಾವು ಒಂದು ವಿಷಯವನ್ನು ಜ್ಞಾನದ ತಕ್ಕಡಿಯಲ್ಲಿ ತೂಗುವ ಹೊರತು ಅದನ್ನು ಒಪ್ಪುವವರಲ್ಲ ಮತ್ತು ನಾಲಗೆಯ ವರೆಗೆ ತರುವವರೂ ಅಲ್ಲ' ಎಂದು ವಾದಿಸುವವರಿಂದಲೇ ಹೊರಡುತ್ತಿರುತ್ತದೆ. ಆದರೆ ಜ್ಞಾನದ ತಕ್ಕಡಿಯು ಅವರ ಈ ಸಂಶೋಧನೆಗೆ, ತೃಣ ಸಮಾನವಾದ ತೂಕವನ್ನು ನೀಡಲೂ ಸಿದ್ಧವಿಲ್ಲ.

ಆದರೆ ಯಾವ ಧರ್ಮಗಳನ್ನು ಒಟ್ಟಾರೆಯಾಗಿ ಸರಿಯೆಂದು ಸಮರ್ಥಿಸಲಾಗುತ್ತದೋ ಅವೆಲ್ಲವುಗಳಲ್ಲೂ ಪರಸ್ಪರ ವ್ಯತ್ಯಾಸಗಳಿವೆ. ಒಂದರ ಪ್ರಕಾರ ದೇವನೊಬ್ಬನೇ. ಇನ್ನೊಂದು ದೇವರಿಬ್ಬರೆಂದರೆ, ಮತ್ತೊಂದು ಮೂರೆನ್ನುತ್ತದೆ. ಮಗದೊಂದು ಅನೇಕ ಶಕ್ತಿಗಳು ದೇವತ್ವದಲ್ಲಿ ಸಹಭಾಗಿಗಳಾಗಿವೆಯೆಂದರೆ, ಐದನೆಯದರ ಶಿಕ್ಷಣದಲ್ಲಿ ದೇವಾಸ್ತಿತ್ವದ ಕಲ್ಪನೆಯೇ ಇಲ್ಲ. ಈ ಐದೂ ವಿಭಾಗಗಳು ಸರಿಯೆನ್ನಲು ಸಾಧ್ಯವೇ? ಒಂದು ಧರ್ಮವು ಮನುಷ್ಯನನ್ನು ದೇವತ್ವದ ಪಟ್ಟಕ್ಕೇರಿಸಿದರೆ, ಇನ್ನೊಂದು ದೇವನನ್ನೇ ಮನುಷ್ಯರ ಮಧ್ಯಕ್ಕೆಳೆದು

ತರುತ್ತದೆ. ಮತ್ತೊಂದು ಮಾನವನನ್ನು ದಾಸನೆಂದೂ ದೇವನನ್ನು ಆರಾಧ್ಯನೆಂದೂ ಸಾರಿದರೆ, ನಾಲ್ಕನೆಯದು ದಾಸ-ಆರಾಧ್ಯನೆಂಬ ಕಲ್ಪನೆಯಿಂದಲೇ ಮುಕ್ತವಾಗಿದೆ. ಈ ನಾಲ್ಕು ವಿಭಾಗಗಳನ್ನೂ ಏಕಕಾಲದಲ್ಲಿ ಸತ್ಯವಂತರೆನ್ನಲು ಸಾಧ್ಯವೇ? ಒಂದು ವಿಭಾಗವು ಮೋಕ್ಷ ಪ್ರಾಪ್ತಿಗೆ ಕರ್ಮವನ್ನಷ್ಟೇ ಅವಲಂಬಿಸಿದರೆ, ಇನ್ನೊಂದು ಅದಕ್ಕೆ ವಿಶ್ವಾಸ ಮಾತ್ರವಿದ್ದರೆ ಸಾಕೆನ್ನುತ್ತದೆ. ಮತ್ತೊಂದು ವಿಶ್ವಾಸ-ಕರ್ಮ ಎರಡನ್ನೂ ಆವಶ್ಯಕವೆಂದು ಸಾರುತ್ತದೆ. ಇವು ಮೂರೂ ಏಕಕಾಲದಲ್ಲಿ ಸರಿಯಾಗಲು ಸಾಧ್ಯವಿದೆಯೇ? ಒಂದು, ಮೋಕ್ಷದ ಹಾದಿಯನ್ನು ಈ ಲೋಕ ಮತ್ತು ಐಹಿಕ ಜೀವನದಿಂದ ಹೊರಗೆ ಹುಡುಕುತ್ತಾದರೆ, ಇನ್ನೊಂದರ ಪ್ರಕಾರ ಮೋಕ್ಷದ ಹಾದಿ ಇಹಲೋಕ ಜೀವನದಿಂದಲೇ ಹೊರಡುತ್ತದೆ. ಈ ಎರಡೂ ಹಾದಿಗಳು ಒಟ್ಟಿಗೇ ಸರಿಯಾಗಲು ಸಾಧ್ಯವೇ? ಇಂಥ ವೈರುಧ್ಯಗಳನ್ನು ಸತ್ಯವೆಂದು ತೀರ್ಪು ನೀಡುವ ವಸ್ತುವನ್ನು ವಿವೇಕವೆಂದು ಹೇಳಿದರೆ, 'ಪರಸ್ಪರ ವಿರುದ್ಧ ವಸ್ತುಗಳು ಒಟ್ಟುಗೂಡುವುದು ಅಸಾಧ್ಯ' ಎಂದು ಸಾರುವ ತತ್ವಕ್ಕೆ ಏನೆನ್ನಬೇಕು?

ವಿಪರ್ಯಾಸವೆಂದರೆ, ಬಾಹ್ಯವನ್ನಷ್ಟೇ ವೀಕ್ಷಿಸುವವರು ಧರ್ಮಗಳಲ್ಲಿ ಕಂಡು ಬರುವ ಕೆಲವು ಸಮಾನಾಂಶಗಳ ಬಗ್ಗೆ, ಅವುಗಳ ವಾಸ್ತವಿಕತೆಗಳನ್ನು ತಿಳಿಯುವ ಪ್ರಯತ್ನ ಮಾಡುವುದಿಲ್ಲ; ಬದಲಾಗಿ ಕೇವಲ ಹೊರನೋಟಕ್ಕೆ ಕಾಣುವವುಗಳನ್ನು ಅವಲೋಕಿಸಿ ಕೆಲವು ತಪ್ಪು ಅಭಿಪ್ರಾಯಗಳನ್ನು ತಪ್ಪಾದ ರೀತಿಯಲ್ಲಿ ಗ್ರಹಿಸಿ ತಪ್ಪಾಗಿ ವ್ಯಾಖ್ಯಾನಿಸುತ್ತಾರೆ. ಆದರೆ, ವಾಸ್ತವದಲ್ಲಿ ಈ ಸಮಾನಾಂಶಗಳು ನಮ್ಮನ್ನು ಒಂದು ಪ್ರಮುಖ ವಸ್ತುಸ್ಥಿತಿಯ ಕಡೆಗೆ ಕೊಂಡೊಯ್ಯುತ್ತವೆ. ಅದೇನೆಂದರೆ, ಈ ಎಲ್ಲಾ ಧರ್ಮಗಳೂ ಒಂದೇ ಮೂಲದಿಂದ ಬಂದದ್ದಾಗಿವೆ. ಅವುಗಳ ಕಲ್ಪನೆ ಮತ್ತು ಬೋಧನೆಗಳ ಚಿಲುಮೆ ಒಂದೇ ಆಗಿದೆ. ಮಾನವರಿಗೆ ವಿವಿಧ ದೇಶ, ವಿವಿಧ ಕಾಲ ಮತ್ತು ವಿವಿಧ ಭಾಷೆಗಳಲ್ಲಿ ಈ ಸಮಾನ ಸತ್ಯಗಳನ್ನು ತಿಳಿಸಿದ ಮೂಲ ಒಂದೇ ಆಗಿದೆ. ಪೂರ್ವ-ಪಶ್ಚಿಮಗಳಷ್ಟು ಅಂತರವಿರುವ ಮತ್ತು ಸಾವಿರಾರು ವರ್ಷಗಳಷ್ಟು ಅಂತರದಲ್ಲಿ ಬಂದಂತಹ ಜನರಿಗೂ ಈ ಅಂತರ್‌ದೃಷ್ಟಿ ದೊರೆತಿದೆ. ಈ ಅಂತರ್‌ದೃಷ್ಟಿಯಿಂದ ಅವರೆಲ್ಲರೂ ಒಂದೇ ರೀತಿಯ

ನಿರ್ಣಯಕ್ಕೆ ಬಂದಿದ್ದರು. ಆದರೆ, ಧರ್ಮಗಳು ತಮ್ಮ ಮೂಲದಿಂದ ದೂರವಾದಾಗ, ಅವುಗಳಲ್ಲಿ ಕೆಲವು ಬಾಹ್ಯ ಕಲ್ಪನೆಗಳು, ಪರಕೀಯ ವಿಶ್ವಾಸ ಮತ್ತು ಶಿಕ್ಷಣ ಸೇರಿಕೊಂಡಿತು. ಅನಂತರ ಬಂದಂತಹ ಈ ವಿಷಯಗಳು ಈ ಸಮಾನ ಮೂಲ ಮತ್ತು ಸಮಾನ ಅಂತರ್‌ದೃಷ್ಟಿಯಿಂದ ಹೊರಟವುಗಳಲ್ಲ. ಬದಲಾಗಿ, ವಿವಿಧ ಗುಣಸ್ವಭಾವಗಳು, ವಿವಿಧ ಒಲವುಗಳು ಮತ್ತು ವಿವಿಧ ರೀತಿಯ ಜ್ಞಾನ-ವಿವೇಕಗಳನ್ನು ಹೊಂದಿದ ಜನರ ಪ್ರಾಕೃತಿಕ ಗುಣದಿಂದ ಉಂಟಾಗಿರುವುದಾಗಿವೆ. ಆದ್ದರಿಂದ ಅವರು ಈ ಸಮಾನ ಬುನಾದಿಗಳ ಮೇಲೆ ನಿರ್ಮಿಸಿದ ಕಟ್ಟಡಗಳು ತಂತಮ್ಮ ಸ್ವಭಾವ ಸ್ವರೂಪಗಳಲ್ಲಿ ಪರಸ್ಪರ ಭಿನ್ನವಾಗಿ ಮಾರ್ಪಟ್ಟುವು.

ಆದುದರಿಂದ ಸತ್ಯ ಮತ್ತು ಪರಮಾರ್ಥದ ಲೇಬಲನ್ನು ಹಚ್ಚುವುದಿದ್ದರೆ ಸರ್ವಧರ್ಮಗಳಲ್ಲೂ ಕಂಡು ಬರುವ ಮೂಲಭೂತ ಸಮಾನ ಅಂಶಗಳಿಗೆ ಮಾತ್ರ ಹಚ್ಚಬಹುದಾಗಿದೆ. ಪ್ರಸಕ್ತ ಧರ್ಮಗಳಲ್ಲಿ ಕಂಡು ಬರುವ ವಿವಿಧ ಸ್ವಭಾವ ಸ್ವರೂಪಗಳಿಗಲ್ಲ. ಏಕೆಂದರೆ ಸತ್ಯವು ಕೇವಲ ಒಂದು ವರ್ಗಕ್ಕೆ ಸೇರಿದೆ. ಅದರ ಅನುಯಾಯಿಗಳಲ್ಲಿ ಭಿನ್ನತೆಗಳಿರಲಾರವು. ಕಪ್ಪು-ಬಿಳುಪು, ಕೆಂಪು-ಹಸಿರುಗಳಿಗೆ 'ಬಣ್ಣ'ವೆಂಬ ಸಮಾನ ಪದವನ್ನು ಬಳಸುವ ರೀತಿಯಲ್ಲಿ, ದೇವನೊಬ್ಬನೇ, ದೇವರಿಬ್ಬರು ಮತ್ತು ದೇವರು ಅನೇಕರು ಎಂಬ ವಿವಿಧ ಧೋರಣೆಗಳ ಮೇಲೆ 'ಸತ್ಯ'ವೆಂಬ ಸಮಾನ ಪದವನ್ನು ಬಳಸಲು ಸಾಧ್ಯವಿಲ್ಲ.

ಸರ್ವ ಧರ್ಮಗಳ ಮೂಲವೊಂದೇ ಮತ್ತು ವಿವಿಧ ಜನಾಂಗಗಳ ಮೇಲೆ ವಿವಿಧ ಭಾಷೆಗಳ ಮೂಲಕ ಪ್ರಕಟಪಡಿಸಿದಂತಹ ಪರಮಾರ್ಥವು ಒಂದೇ ಎಂಬುದನ್ನು ಪವಿತ್ರ ಕುರ್‌ಆನಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಪ್ರತಿಯೊಂದು ಜನಾಂಗಕ್ಕೂ ಅಲ್ಲಾಹನು ಸಂದೇಶವಾಹಕರನ್ನು ಕಳುಹಿಸಿರುತ್ತಾನೆಂದು ಅದರಲ್ಲಿ ಅನೇಕ ಕಡೆ ಸಾರಿ ಹೇಳಲಾಗಿದೆ,

"ನಾವು ಪ್ರತಿಯೊಂದು ಸಮುದಾಯಕ್ಕೆ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು..." (ಅನ್ನಹ್ಲ್: 36)

"ನಾವು ನಿಮ್ಮನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿ ಸತ್ಯ

ಸಹಿತ ಕಳುಹಿಸಿರುತ್ತೇವೆ. ಎಚ್ಚರಿಕೆ ಕೊಡುವವರಾರೂ ಬಂದಿರದಂತಹ ಸಮುದಾಯವೊಂದೂ ಗತಿಸಿಲ್ಲ." (ಫಾತಿರ್: 24)

ಈ ಎಲ್ಲಾ ಪ್ರವಾದಿಗಳು, ಸಂದೇಶವಾಹಕರು ಒಂದೇ ಮೂಲದಿಂದ ಸತ್ಯಸಂದೇಶವನ್ನು ಪಡೆಯುತ್ತಿದ್ದರು. ಅವರೆಲ್ಲರೂ, "ಸುಸ್ಪಷ್ಟ ಪ್ರಮಾಣಗಳನ್ನೂ ಕಿರುಗ್ರಂಥಗಳನ್ನೂ ಪ್ರಕಾಶ ನೀಡುವ ಗ್ರಂಥಗಳನ್ನೂ ತಂದಿದ್ದರು." (ಆಲಿ ಇಮ್ರಾನ್: 184)

"ನಾವು ನಮ್ಮ ಸಂದೇಶವಾಹಕರನ್ನು ಸುವ್ಯಕ್ತ ನಿದರ್ಶನಗಳು ಮತ್ತು ಸನ್ಮಾರ್ಗದರ್ಶನದೊಂದಿಗೆ ಕಳುಹಿಸಿದೆವು. ಜನರು ನ್ಯಾಯದಲ್ಲಿ ಸ್ಥಿರವಾಗಿ ನಿಲ್ಲಲೆಂದು ಅವರ ಜತೆ ಗ್ರಂಥ ಮತ್ತು ತಕ್ಕಡಿಯನ್ನು ಅವತೀರ್ಣಗೊಳಿಸಿದೆವು..." (ಅಲ್ ಹದೀದ್: 25)

ಅವರೆಲ್ಲರ ಸಂದೇಶವೂ ಒಂದೇ ಆಗಿತ್ತು. ಅದೇನೆಂದರೆ,

"ಅಲ್ಲಾಹನ ದಾಸ್ಯಾರಾಧನೆ ಮಾಡಿರಿ ಮತ್ತು 'ತಾಗೂತ್'ನ ಆರಾಧನೆಯಿಂದ ದೂರವಿರಿ." (ಅನ್ನಹ್ಲ್: 36)

ಎಲ್ಲರಿಗೂ ಅಲ್ಲಾಹನ ವತಿಯಿಂದ ಒಂದೇ ವಹ್ಯ್ (ದಿವ್ಯವಾಣಿ) ಅವತೀರ್ಣವಾಗಿತ್ತು.

"ನಾವು ನಿಮಗಿಂತ ಮುಂಚೆ ಕಳುಹಿಸಿದ ಪ್ರತಿಯೊಬ್ಬ ಸಂದೇಶವಾಹಕರಿಗೂ, 'ನನ್ನ ಹೊರತು ಅನ್ಯ ದೇವರಿಲ್ಲ. ಆದ್ದರಿಂದ ನೀವು ನನ್ನ ದಾಸ್ಯಾರಾಧನೆಯನ್ನೇ ಮಾಡಿರಿ' ಎಂದು ವಹ್ಯ್ (ದಿವ್ಯವಾಣಿ) ಮಾಡಿದ್ದೆವು." (ಅಲ್ ಅಂಬಿಯಾ: 25)

ಅವರಲ್ಲಿ ಯಾರೂ, ತಾನು ಪ್ರಸ್ತುತ ಪಡಿಸುತ್ತಿರುವವುಗಳೆಲ್ಲ ತನ್ನ ಬುದ್ಧಿ-ಚಿಂತನೆಗಳ ಫಲವೆಂದು ಹೇಳಲಿಲ್ಲ. ಬದಲಾಗಿ ಇದೆಲ್ಲವೂ ಅಲ್ಲಾಹನ ಕಡೆಯಿಂದಾಗಿದೆಯೆಂದೇ ಹೇಳಿದರು, "ನಿಮಗೇನಾದರೂ ಆಧಾರ ಪ್ರಮಾಣ ತರುವುದು ನಮ್ಮ ಅಧಿಕಾರದಲ್ಲಿಲ್ಲ. ಆಧಾರ ಪ್ರಮಾಣ ಅಲ್ಲಾಹನ ಅನುಜ್ಞೆಯಿಂದಲೇ ಬರಬಲ್ಲುದು ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ

ಮೇಲೆಯೇ ಭರವಸೆಯಿಡಬೇಕು. ನಮ್ಮ ಜೀವನ ಮಾರ್ಗಗಳಲ್ಲಿ ಅಲ್ಲಾಹ್ ನಮಗೆ ಮಾರ್ಗದರ್ಶನ ಮಾಡಿರುವಾಗ ನಾವು ಅವನ ಮೇಲೆ ಏಕೆ ಭರವಸೆ ಇಡಬಾರದು?" (ಇಬ್ರಾಹೀಮ್: 11–12)

ಮತ್ತು ಅವರಲ್ಲಿ ಯಾರೂ ಕೂಡ 'ನೀವು ನಮ್ಮ ದಾಸ್ಯಾರಾಧನೆ ಮಾಡಿರಿ' ಎಂದು ಹೇಳಿಲ್ಲ. ಬದಲಾಗಿ ಎಲ್ಲರೂ, 'ದೇವಭಕ್ತರಾಗಿರಿ' ಎಂದೇ ಕರೆ ನೀಡಿದರು,

"ಅಲ್ಲಾಹನು ಗ್ರಂಥವನ್ನೂ ನಿರ್ದೇಶವನ್ನೂ ಪ್ರವಾದಿತ್ವವನ್ನೂ ದಯ ಪಾಲಿಸಿರುವಾಗ ಜನರೊಡನೆ, ನೀವು ಅಲ್ಲಾಹನ ಬದಲಿಗೆ ನನ್ನ ದಾಸರಾಗಿರಿ ಎನ್ನುವುದು ಯಾವನೇ ಮಾನವನ ಕೆಲಸವಲ್ಲ. ಅವನಂತೂ, ನೀವು ಓದು ತ್ತಿರುವ ಮತ್ತು ಓದಿಸುತ್ತಿರುವ ಗ್ರಂಥದ ಬೋಧನೆಯ ಬೇಡಿಕೆಯ ಪ್ರಕಾರ ಅಪ್ಪಟ ದೇವಭಕ್ತ ಆಗಿರೆಂದೇ ಹೇಳುವನು." (ಆಲಿ ಇಮ್ರಾನ್: 79)

ಇದಾಗಿತ್ತು ಸರ್ವ ಜನಾಂಗಗಳ ಧಾರ್ಮಿಕ ಮಾರ್ಗದರ್ಶಕರು ಕಲಿಸಿದ ಸಮಾನ ಬೋಧನೆಗಳು.

ಮಾನವರೆಲ್ಲರೂ ಪ್ರಥಮತಃ ಒಂದೇ ಜನಾಂಗವಾಗಿದ್ದರೆಂಬುದು ಕುರ್‌ಆನಿನ ವಾದವಾಗಿದೆ. ಅರ್ಥಾತ್: ಅವರೆಲ್ಲರೂ ಒಂದು ಮಾನವ ಸಹಜ ಸ್ಥಿತಿಯಲ್ಲಿದ್ದರು ಮತ್ತು ಅವರ ಬಳಿ ಅಲ್ಲಾಹನ ವತಿಯಿಂದ ಮಾರ್ಗದರ್ಶನ ಬಂದಿತ್ತು.[1] ಬಳಿಕ ಕ್ರಮೇಣ ಅದರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು. ಅವರಲ್ಲಿ ಕೆಲವರು ತಮ್ಮ ಧರ್ಮ ಸಮ್ಮತ ಪರಿಧಿಯಿಂದ ಹೊರಬರುವ, ತಮ್ಮ ಸ್ವಾಭಾವಿಕ ಸ್ಥಾನದಿಂದ ಅಧಿಕ ಎತ್ತರದ ಸ್ಥಾನ ಗಳಿಸುವ ಮತ್ತು ತಮ್ಮ ಸ್ವಾಭಾವಿಕ ಹಕ್ಕುಗಳಿಗಿಂತ ಹೆಚ್ಚಿನ ಹಕ್ಕುಗಳನ್ನು

1. ಒಂದು ವಿಷಯವನ್ನು ಇಲ್ಲಿ ನೆನಪಿಡಬೇಕಾಗಿದೆ– ಇಂದಿನ ವಿಕಾಸವಾದ ಮತ್ತು ಇತಿಹಾಸದ ಅಧ್ಯಯನಗಳಿಗೆ ವ್ಯತಿರಿಕ್ತವಾಗಿ ಪವಿತ್ರ ಕುರ್‌ಆನ್ ಹೀಗೆ ಸಾರುತ್ತದೆ– ಭೂಮಿಯಲ್ಲಿ ಮಾನವ ಜೀವನದ ಆರಂಭವು ಅಜ್ಞಾನದ ಅಂಧಕಾರಗಳಿಂದಾದುದಲ್ಲ; ಬದಲಾಗಿ ದೇವದತ್ತ ಜ್ಞಾನದ ಪ್ರಕಾಶದೊಂದಿಗಾಗಿತ್ತು. ದೇವನು ಪ್ರಥಮ ಮಾನವ ಅಂದರೆ, ಆದಮ್(ಅ)ರನ್ನು ತನ್ನ ಪ್ರವಾದಿಯನ್ನಾಗಿ ಮಾಡಿದನು ಮತ್ತು ಅವರಿಗೆ ದಿವ್ಯ ಜ್ಞಾನದ ಮೂಲಕ, ಭೂಲೋಕದಲ್ಲಿ ನೇರಮಾರ್ಗದಲ್ಲಿ ಜೀವನ ನಡೆಸಲು ಬೇಕಾದಂತಹ ಜ್ಞಾನವನ್ನು ನೀಡಿದನು.

ಚಲಾಯಿಸುವ ಪ್ರಯತ್ನ ಮಾಡಿದ್ದೇ ಈ ಭಿನ್ನಾಭಿಪ್ರಾಯಗಳಿಗೆ ಕಾರಣ. ಆಗ ಅಲ್ಲಾಹನ ಕಡೆಯಿಂದ ಪ್ರವಾದಿಗಳು ನೇಮಕಗೊಳ್ಳತೊಡಗಿದರು. ಜನರಿಗೆ ಸತ್ಯದ ಸರಿಯಾದ ಜ್ಞಾನ ದೊರಕಿಸಿಕೊಡುವುದು ಮತ್ತು ಅವರ ಮಧ್ಯೆ ಸಾಮಾಜಿಕ ನ್ಯಾಯ (Social Justice) ಸ್ಥಾಪಿಸುವುದೇ ಎಲ್ಲ ಪ್ರವಾದಿಗಳ ಕಾರ್ಯಭಾರವಾಗಿತ್ತು.

ಯಾರು ಈ ಸಂದೇಶವನ್ನು ಸ್ವೀಕರಿಸಿದರೋ, ಪ್ರವಾದಿಗಳ ಬೋಧನೆಗಳನ್ನು ಅನುಸರಿಸಿದರೋ ಮತ್ತು ಪ್ರವಾದಿಗಳು ತೋರಿಸಿದ ಕಾನೂನುಗಳನ್ನು ಅನುಸರಿಸಿದರೋ ಅವರು ಮಾತ್ರವೇ ಸತ್ಯದಲ್ಲಿರುವರು. ಉಳಿದವರು ಮಿಥ್ಯದಲ್ಲಿರುವರು. ಪ್ರವಾದಿಗಳ ಅನುಸರಣೆಯನ್ನು ನಿರಾಕರಿಸಿದವರೂ ಮಿಥ್ಯದಲ್ಲಿರುವರು ಮತ್ತು ಪ್ರವಾದಿಗಳ ಶಿಕ್ಷಣ ವನ್ನು ತಮ್ಮ ಚಿತ್ತಾಕಾಂಕ್ಷೆಗಳ ಪ್ರಕಾರ ಪರಿಷ್ಕರಿಸಿದವರೂ ಮಿಥ್ಯದಲ್ಲಿರುವರು.

"ಆರಂಭ ಕಾಲದಲ್ಲಿ ಮಾನವರೆಲ್ಲರೂ ಒಂದೇ ಸಮುದಾಯವಾಗಿದ್ದರು. ಅನಂತರ ಅವರು ವಿವಿಧ ತತ್ವಾದರ್ಶಗಳನ್ನು ಉಂಟುಮಾಡಿಕೊಂಡರು."

(ಯೂನುಸ್: 19)

"ಆರಂಭದಲ್ಲಿ ಜನರೆಲ್ಲರೂ ಒಂದೇ ಸಂಪ್ರದಾಯದವರಾಗಿದ್ದರು. (ಈ ಸ್ಥಿತಿ ಬಹುಕಾಲ ಉಳಿಯಲಿಲ್ಲ. ಅವರೊಳಗೆ ಭಿನ್ನಾಭಿಪ್ರಾಯಗಳುಂಟಾದುವು) ಆಗ ಅಲ್ಲಾಹನು ಸತ್ಯಮಾರ್ಗದ ಬಗ್ಗೆ ಸುವಾರ್ತೆ ನೀಡುವವರೂ ಮಿಥ್ಯ ಮಾರ್ಗದ ಬಗ್ಗೆ ಎಚ್ಚರಿಕೆ ಕೊಡುವವರೂ ಆದ ಪ್ರವಾದಿಗಳನ್ನು ರವಾನಿಸಿದನು ಮತ್ತು ಅವರೊಂದಿಗೆ, ಸತ್ಯದ ವಿಷಯದಲ್ಲಿ ಜನರಲ್ಲುಂಟಾಗಿದ್ದ ಭಿನ್ನಾಭಿಪ್ರಾಯಗಳ ಬಗ್ಗೆ ತೀರ್ಪು ನೀಡಲಿಕ್ಕಾಗಿ ಪರಮ ಸತ್ಯ ಗ್ರಂಥವನ್ನು ಇಳಿಸಿದನು. (ಪ್ರಾರಂಭದಲ್ಲಿ ಜನರಿಗೆ ಸತ್ಯವನ್ನು ತೋರಿಸಿ ಕೊಡದಿದ್ದುದರಿಂದೇನೂ ಅವರಲ್ಲಿ ಈ ತರದ ಭಿನ್ನಾಭಿಪ್ರಾಯಗಳು ತಲೆದೋರಿದುದಲ್ಲ) ನಿಜವಾಗಿ ಸತ್ಯದ ಶಿಕ್ಷಣ ಕೊಡಲ್ಪಟ್ಟವರೇ ಈ ಅಭಿಪ್ರಾಯ ಭೇದಗಳನ್ನುಂಟು ಮಾಡಿದರು. ಅವರು ಪರಸ್ಪರ ಅತಿರೇಕ ನಡೆಸಲು ಇಷ್ಟಪಡುತ್ತಿದ್ದುದರಿಂದಲೇ ಸುವ್ಯಕ್ತ ದೃಷ್ಟಾಂತಗಳನ್ನು ಪಡೆದ ಬಳಿಕವೂ ಸತ್ಯವನ್ನು ತ್ಯಜಿಸಿ ವಿವಿಧ

ಹಾದಿಗಳನ್ನು ಸೃಷ್ಟಿಸಿಕೊಂಡರು.[1] ಜನರು ಭಿನ್ನಾಭಿಪ್ರಾಯ ತಾಳಿದ್ದ ಆ ಸತ್ಯಮಾರ್ಗವನ್ನು ಅಲ್ಲಾಹನು ತನ್ನ ಅಪ್ಪಣೆಯಿಂದ, ಪ್ರವಾದಿಗಳ ಮೇಲೆ ವಿಶ್ವಾಸವಿಟ್ಟವರಿಗೆ ತೋರಿಸಿಕೊಟ್ಟನು. ಅಲ್ಲಾಹ್ ತಾನಿಚ್ಛಿಸಿದವರಿಗೆ ಸನ್ಮಾರ್ಗವನ್ನು ತೋರಿಸುತ್ತಾನೆ." (ಅಲ್ ಬಕರ: 213)

"ನಾವು ನಮ್ಮ ಸಂದೇಶವಾಹಕರನ್ನು ಸುವ್ಯಕ್ತ ನಿದರ್ಶನಗಳು ಮತ್ತು ಸನ್ಮಾರ್ಗದರ್ಶನದೊಂದಿಗೆ ಕಳುಹಿಸಿದೆವು. ಜನರು ನ್ಯಾಯದಲ್ಲಿ ಸ್ಥಿರವಾಗಿ ನಿಲ್ಲಲೆಂದು ಅವರ ಜತೆ ಗ್ರಂಥ ಮತ್ತು ತಕ್ಕಡಿಯನ್ನು[2] ಇಳಿಸಿದೆವು ಮತ್ತು ನಾವು ಕಬ್ಬಿಣವನ್ನು ಇಳಿಸಿದೆವು. ಅದರಲ್ಲಿ ಭಾರೀ ಶಕ್ತಿಯಿದೆ ಮತ್ತು ಜನರಿಗೆ ಪ್ರಯೋಜನಗಳಿವೆ." (ಅಲ್ ಹದೀದ್: 25)

"ನನ್ನ ಈ ಮಾರ್ಗದರ್ಶನವನ್ನು ಅನುಸರಿಸಿದವನು ದಾರಿಗೆಡಲಾರನು ಮತ್ತು ದುರದೃಷ್ಟಕ್ಕೆ ಒಳಗಾಗಲಾರನು. ನನ್ನ ಬೋಧನೆಯಿಂದ ವಿಮುಖನಾದವನ ಜೀವನವು ಭೂಲೋಕದಲ್ಲಿ ಸಂಕೀರ್ಣವಾಗುವುದು ಮತ್ತು ಪುನರುತ್ಥಾನದ ದಿನ ನಾವು ಅವನನ್ನು ಕುರುಡನನ್ನಾಗಿ ಮಾಡಿ ಎಬ್ಬಿಸುವೆವು."

(ತಾಹಾ: 123–124)

---

1. ಮೂಲ ಸೂಕ್ತದಲ್ಲಿ ಕುರ್‌ಆನ್ 'ಬಗಿಯ್' ಎಂಬ ಪದವನ್ನು ಬಳಸಿದೆ. ಇದರ ಭಾವಾರ್ಥ– ತನ್ನ ಧರ್ಮಸಮ್ಮತ ಮೇರೆಗಳನ್ನು ಮೀರುವುದು ಮತ್ತು ಅತಿರೇಕ ಹಾಗೂ ವಿದ್ರೋಹವೆಸಗುವುದು. ಕೆಲವು ಮಾನವರಲ್ಲಿ ಅತಿರೇಕದ ಭಾವನೆಗಳು ಬೆಳೆಯುವುದನ್ನು ಎಲ್ಲ ರೀತಿಯ ಪಥಭ್ರಷ್ಟತೆ ಹಾಗೂ ಸಾಮಾಜಿಕ ಅನ್ಯಾಯ(Social Injustice)ಗಳಿಗೆ ಕಾರಣವೆಂದು ಕುರ್‌ಆನ್ ಹೇಳಿದೆ. ಉದಾ: ಮಾನವರಲ್ಲಿ ಕೆಲವರು ಇತರ ಮಾನವರ ದೇವರಾಗಿ ಮೆರೆಯುತ್ತಾರೆ ಮತ್ತು ಜನರಿಂದ ತಮ್ಮ ದಾಸ್ಯಾನುಸರಣೆ ಮಾಡಿಸುತ್ತಾರೆ. ಕೆಲವರಿಗೆ ಸ್ವತಃ ದೇವರಾಗುವ ಧೈರ್ಯವಿರುವುದಿಲ್ಲ; ಆದರೆ ಯಾವುದಾದರೂ ವಿಗ್ರಹ ಅಥವಾ ಕಾಲ್ಪನಿಕ ದೇವತೆಯ ಅಥವಾ ಗೋರಿಯ ಪರಿಚಾರಕರಾಗುತ್ತಾರೆ. ಆ ದೇವರುಗಳ ಮೂಲಕ ಜನರಲ್ಲಿ ತಮ್ಮ ಅಧಿಕಾರ ಸ್ಥಾಪಿಸು ತ್ತಾರೆ. ಕೆಲವರು ಧಾರ್ಮಿಕ ನೇತಾರರಾಗಿ ಜನರ ಕ್ಷೇಮಾಭಿವೃದ್ಧಿ ಮತ್ತು ಮೋಕ್ಷದ ಗುತ್ತೇದಾರಿಕೆಯನ್ನು ಪಡೆದುಕೊಳ್ಳುತ್ತಾರೆ. ಈ ಪ್ರಕಾರ ಬ್ರಾಹ್ಮಣತ್ವ ಮತ್ತು ಪೌರೋಹಿತ್ಯ ಅಸ್ತಿತ್ವಕ್ಕೆ ಬರುತ್ತವೆ. ಕೆಲವರು ತಮ್ಮ ಶ್ರೀಮಂತಿಕೆಯನ್ನೇ ಬಂಡವಾಳವಾಗಿಸಿ ಆರ್ಥಿಕ ಶೋಷಣೆಯ ವಿವಿಧ ರೂಪಗಳನ್ನು ಯೋಜಿಸುತ್ತಾರೆ. ಒಟ್ಟಿನಲ್ಲಿ ಮಾನವನನ್ನು ಅವನ ನೈಸರ್ಗಿಕ ಅವಸ್ಥೆಯಿಂದ ಹೊರ ತಂದು ಆಚಾರ ಮತ್ತು ಸಾಮಾಜಿಕ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿಸುವಂತಹ ಅವಸ್ಥೆಯನ್ನೇ ಇಲ್ಲಿ ವಾಸ್ತವ ದಲ್ಲಿ 'ಬಗಿಯ್' ಎನ್ನಲಾಗಿದೆ.

2. ತಕ್ಕಡಿಯೆಂದರೆ ಮಾನವರ ಮಧ್ಯೆ ಸಮತೋಲನ ಕಾಪಾಡುವಂತಾಗಲು ದೈವಿಕ ಶರೀಅತ್‌ನ ರೂಪದಲ್ಲಿ ಪ್ರವಾದಿಗಳ ಮೂಲಕ ಕಳುಹಿಸಲಾದ ಒಂದು ಪರಿಪೂರ್ಣವಾದ ಸಮತೂಕದ (Well Balanced) ಸಾಮಾಜಿಕ ವ್ಯವಸ್ಥೆಯಾಗಿದೆ.

ಇದು, ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳ ಗೊಂದಲದಂತೆಯೇ ಧಾರ್ಮಿಕ ಭಿನ್ನಾಭಿಪ್ರಾಯದ ಗೊಂದಲವನ್ನೂ ಅತ್ಯುತ್ತಮವಾದ ರೀತಿಯಲ್ಲಿ ಪರಿಹರಿಸು ವಂತಹ ಕುರ್‌ಆನಿನ ಚಾರಿತ್ರಿಕ ದೃಷ್ಟಿಕೋನ ಅಥವಾ ಚರಿತ್ರೆಯ ನೈತಿಕ ವಿವರಣೆ(Moral Interpretation of History)ಯಾಗಿದೆ. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ– ಜಗತ್ತಿನ ಎಲ್ಲ ಜನಾಂಗಗಳ ಬಳಿಗೂ ಅಲ್ಲಾಹನ ಪ್ರವಾದಿಗಳು ಬಂದಿದ್ದರು. ಅವರ ಮೂಲ ಉದ್ದೇಶ, ಯಾವ ನೈಸರ್ಗಿಕ ಜೀವನ ವಿಧಾನದಿಂದ ಅವರ ಜನಾಂಗಗಳು ತಮ್ಮ 'ವಿದ್ರೋಹ'ದ ಮೂಲಕ ದೂರವಾಗಿದ್ದುವೋ ಅದರೆಡೆಗೆ ಅವರನ್ನು ಮರಳಿಸುವುದು ಮತ್ತು ಆ ಜನಾಂಗಗಳನ್ನು ಸತ್ಯ–ನ್ಯಾಯದಲ್ಲಿ ಸ್ಥಿರವಾಗಿಸುವುದು. ಆದರೆ ಅವುಗಳ ಅಜ್ಞಾನದ ಮೂಲ ಕಾರಣವಾದ ಅದೇ ವಿದ್ರೋಹದ ಭಾವನೆಯು ಅವುಗಳನ್ನು ಮತ್ತೆ ಮತ್ತೆ ಪಥಭ್ರಷ್ಟಗೊಳಿಸಿ ಅಡ್ಡದಾರಿಗೆಳೆಯುತ್ತಿತ್ತು. ಹಾಗಾಗಿ, ಜಗತ್ತಿನ ವಿವಿಧ ಧರ್ಮಗಳಲ್ಲಿ ಅಲ್ಪಸ್ವಲ್ಪ ಉಳಿದಿರುವ ಸರಿಯಾದ ಕಲ್ಪನೆಗಳು ಮತ್ತು ನೀತಿ ಪರವಾದ ವಿಷಯಗಳು ಎಲ್ಲವೂ ಪ್ರವಾದಿಗಳ ಶಿಕ್ಷಣದ ಅಳಿದುಳಿದ ಪ್ರಭಾವಗಳಾಗಿವೆ. ಅವು ತಮ್ಮ ಸ್ವಂತ ಬಲದಿಂದಾಗಿ ಜನಾಂಗಗಳ ಸ್ಮೃತಿ ಪಟಲದಲ್ಲಿ ಮತ್ತು ಜೀವನದಲ್ಲಿ ಲೀನ ವಾಗಿ ಉಳಿದಿವೆ.

ಆ ಬಳಿಕ ತಾನು ಕರೆ ನೀಡುತ್ತಿರುವ ಇಸ್ಲಾಮ್ ವಾಸ್ತವದಲ್ಲಿ ಅನಾದಿ ಕಾಲದಿಂದಲೂ ಸರ್ವ ಜನಾಂಗಗಳ ಬಳಿಗೂ ನೇಮಕಗೊಂಡ ಪ್ರವಾದಿಗಳು ನೀಡಿದ 'ಸತ್ಯ ಧರ್ಮ'ವೇ ಆಗಿದೆಯೆಂದು ಕುರ್‌ಆನ್ ವಾದಿಸುತ್ತದೆ. ಪ್ರವಾದಿ ಮುಹಮ್ಮದ್‌ರು(ಸ) ಈ ಹಿಂದೆ ಬಂದಿರದಂತಹ ಯಾವುದೇ ಪ್ರತ್ಯೇಕ ಸಂದೇಶವನ್ನೇನೂ ತಂದಿರಲಿಲ್ಲ.

"ಅವರೊಡನೆ ಹೇಳಿರಿ– ನಾನೊಬ್ಬ ಅಪೂರ್ವ ಸಂದೇಶವಾಹಕನಲ್ಲ..."

(ಅಲ್ ಅಹ್‌ಕಾಫ್: 9)

ಬದಲಾಗಿ ಅವರ ಸಂದೇಶವು, ಇತರ ಎಲ್ಲ ಪ್ರವಾದಿಗಳೂ ನೀಡಿದಂತಹ ಸಂದೇಶವೇ ಆಗಿದೆ. "ಓ ಪೈಗಂಬರರೇ, ನಾವು ನೂಹ್

ಮತ್ತು ಅನಂತರದ ಪ್ರವಾದಿಗಳ ಕಡೆಗೆ ದಿವ್ಯವಾಣಿ ಕಳುಹಿಸಿದಂತೆಯೆ ನಿಮ್ಮ ಕಡೆಗೂ ದಿವ್ಯವಾಣಿ ಕಳುಹಿಸಿರುತ್ತೇವೆ." (ಅನ್ನಿಸಾ: 163

ಈ ಸಂದೇಶದಿಂದ ಅರೇಬಿಯಾ, ಈಜಿಪ್ಟ್, ಇರಾನ್, ಭಾರತ ಚೀನಾ, ಜಪಾನ್, ಅಮೇರಿಕಾ, ಯೂರೋಪ್, ಆಫ್ರಿಕಾ ಇತ್ಯಾ ಯಾವುದೇ ದೇಶವು ವಂಚಿತವಾಗಿರಲಿಲ್ಲ. ಎಲ್ಲ ಕಡೆಗೂ ಅಲ್ಲಾಹ ಗ್ರಂಥಗಳು ಅವತೀರ್ಣಗೊಂಡಿದ್ದುವು. ಹಾಗೆಯೇ ಬಹುಶಃ ಬುದ್ಧ, ಕೃಷ್ಣ ರಾಮ, ಕನ್‌ಫ್ಯೂಶಸ್, ಝುರತುಷ್ಟ್ರ, ಮಾನಿ, ಸಾಕ್ರೆಟಿಸ್, ಪೈಥಾಗೊರಸ ಇತ್ಯಾದಿ ವ್ಯಕ್ತಿತ್ವಗಳು ಆ ಪ್ರವಾದಿಗಳ ಸಾಲಿನಲ್ಲಿ ಸೇರಿದವರಾಗಿರಲು ಬಹುದು. ಆದರೆ ಪ್ರವಾದಿ ಮುಹಮ್ಮದ್(ಸ) ಮತ್ತು ಆ ಇತ ಮಾರ್ಗದರ್ಶಕರ ಮಧ್ಯೆಯಿರುವ ವ್ಯತ್ಯಾಸವೆಂದರೆ, ಅವರೆಲ್ಲರ ಶಿಕ್ಷಣ ಜನರ ಭಿನ್ನಾಭಿಪ್ರಾಯಗಳಲ್ಲಿ ಹುದುಗಿ ಹೋದುವು. ಆದರೆ ಪ್ರವಾ ಮುಹಮ್ಮದರ(ಸ) ಬೋಧನೆಗಳೆಲ್ಲವೂ ತಮ್ಮ ನೈಜ ರೂಪದಲ್ಲಿ ಇಂದಿಗೂ ಸುರಕ್ಷಿತವಾಗಿ ಉಳಿದಿವೆ.

ಆದ್ದರಿಂದ, ವಾಸ್ತವದಲ್ಲಿ ಇಸ್ಲಾಮ್ ಎಂಬುದು ಅನೇಕ ಧರ್ಮಗ ಲ್ಲೊಂದು ಧರ್ಮವಲ್ಲ. ಬದಲಾಗಿ ಮಾನವ ಜನಾಂಗದ ನೈಜ ಧರ್ಮ ಇದುವೇ ಆಗಿದೆ ಮತ್ತು ಇತರ ಎಲ್ಲ ಧರ್ಮಗಳೂ ಇದೇ ಧರ್ಮ ಅಪಭ್ರಂಶಗೊಂಡ ರೂಪಗಳಾಗಿವೆ. ಧರ್ಮಗಳಲ್ಲಿ ಕಂಡು ಬರುವ 'ಸತ್ಯ ಮತ್ತು 'ಪರಮಾರ್ಥ'ವು ವಾಸ್ತವದಲ್ಲಿ ಅದರದೇ ಅಳಿದುಳಿದ ಪ್ರಭಾವವಾಗಿದೆ

ಅದು ಆ ಎಲ್ಲ ಜನಾಂಗಗಳ ಬಳಿಗೂ ಬಂದಿದ್ದು ಜನ ಭಿನ್ನಾಭಿಪ್ರಾಯಗಳಲ್ಲಿ ಹುದುಗಿ ಹೋಗಿತ್ತಷ್ಟೆ. ಯಾವುದೇ ಧರ್ಮದ ಪರಮಾರ್ಥವು ಎಷ್ಟು ಪ್ರಮಾಣದಲ್ಲಿರುವುದೋ ಅಷ್ಟೇ ಪ್ರಮಾಣದ ಇಸ್ಲಾಮ್ ಅದರಲ್ಲಿದೆ ಎನ್ನಬಹುದು.

ಇನ್ನು ಮೂಲ 'ಇಸ್ಲಾಮ್'ನ ವಿರುದ್ಧವಿರುವ ಭಿನ್ನಾಭಿಪ್ರಾಯಗಳ ವಸ್ತುತಃ ಮಿಥ್ಯವಾಗಿವೆ. ಅದಕ್ಕೆ ಸತ್ಯದ ಹಣೆಪಟ್ಟಿ ಹಚ್ಚುವುದು ಅತಿರೇಕವಾಗ ತ್ತದೆ. ಈ ರೀತಿಯ ಮಿಥ್ಯ ಸಹಿಷ್ಣುತೆಯನ್ನು ಪ್ರಕಟಿಸುವುದರ ಬದಲು

ನಾವು ನಮ್ಮ ಸಕಲ ಮಾನವ ಸೋದರರೊಂದಿಗೆ ಹೀಗೆ ಹೇಳಬೇಕಾಗಿದೆ– ಮಿತ್ರರೇ, ದಯವಿಟ್ಟು ಪೂರ್ವಗ್ರಹ ಮತ್ತು ಸಂಕುಚಿತ ದೃಷ್ಟಿಕೋನದಿಂದ ಹೊರಬಂದು, ಸತ್ಯ–ಮಿಥ್ಯಗಳ ಅಸ್ಪಷ್ಟತೆಯಲ್ಲಿ ಬಿದ್ದು ಬಿಡುವುದನ್ನು ತೊರೆದು, ಸುಸ್ಪಷ್ಟವಾದುದನ್ನು ಅಂಗೀಕರಿಸಿಕೊಳ್ಳಿರಿ. ಸತ್ಯವು ಯಾವುದೇ ಜನಾಂಗ, ವಂಶ ಅಥವಾ ದೇಶದ ಗುತ್ತಿಗೆಯಲ್ಲ. ಬದಲಾಗಿ ಸಕಲ ಮಾನವ ಕುಲದ ಸಮಾನ ಹಕ್ಕಾಗಿದೆ. ಈ ಹಕ್ಕು ಸರ್ವಲೋಕ ಪರಿಪಾಲಕನ ಕಡೆಯಿಂದ ಜಗತ್ತಿನೆಲ್ಲ ಜನಾಂಗ ಹಾಗೂ ವಂಶಗಳಿಗೂ ಹಂಚಿ ಬಿಡಲಾಗಿದೆ. ಜನರು ಅದನ್ನು ಕೆಡಿಸಿದ್ದಾರೆ ಮತ್ತು ಅದರಲ್ಲಿ ಸೃಷ್ಟಿ ಆರಾಧನೆಯ, ಅನ್ಯಾಯ–ದೌರ್ಜನ್ಯದ ಮತ್ತು ಅನಗತ್ಯ ತಾರತಮ್ಯಗಳ ವಿಷ ಬೆರೆಸಿದ್ದಾರೆ. ಅದೊಂದು ದುರ್ವಿಧಿಯಾಗಿದೆ. ನಮ್ಮ ನಿಮ್ಮೆಲ್ಲರ ದುರ್ವಿಧಿ! ಇದನ್ನು ನಿಮ್ಮ ಪೂರ್ವಜರು ಭದ್ರವಾಗಿ ಹಿಡಿದಿಟ್ಟುಕೊಂಡರೆಂಬ ಕಾರಣಕ್ಕೆ ನೀವೂ ಇದರಲ್ಲೇ ಅಂಟಿಕೊಂಡಿರುವುದರಲ್ಲಿ ಅರ್ಥವಿಲ್ಲ. ಅದೇ ರೀತಿ ಪ್ರವಾದಿ ಮುಹಮ್ಮದ್‌ರು(ಸ) ಈ ಸತ್ಯವನ್ನು ಗಳಿಸಿದಾಗ ಅದನ್ನು ಅದರ ಮೂಲ ರೂಪದಲ್ಲೇ ಇತರರಿಗೆ ತಲುಪಿಸಿದರು. ಅದರಲ್ಲಿ ಯಾವುದೇ ರೀತಿಯ ಸೃಷ್ಟಿ ಆರಾಧನೆ ಅಥವಾ ದೌರ್ಜನ್ಯಪೂರ್ಣ, ಅನ್ಯಾಯಯುತ ಸಂಪ್ರದಾಯ ಅಥವಾ ಯಾವುದೇ ರೀತಿಯ ಅನಗತ್ಯ ತಾರತಮ್ಯದ ವಿಷ ಬೆರೆಯದಿರುವುದು ಒಂದು ಅದೃಷ್ಟವಾಗಿದೆ. ನಮ್ಮ ಮತ್ತು ನಿಮ್ಮ ಎಲ್ಲ ಮಾನವರ ಅದೃಷ್ಟ! ಇದಕ್ಕಾಗಿ ಕೃತಜ್ಞತೆ ಸಲ್ಲಿಸಿರಿ ಮತ್ತು ದೇವನಲ್ಲಿ ಈ ಅನುಗ್ರಹವು ಕೇವಲ ಅರೇಬಿಯಾದ ಮೂಲಕ ನಿಮಗೆ ತಲುಪಿದೆಯೆಂಬ ಕಾರಣಕ್ಕಾಗಿ ಇದರಿಂದ ಪ್ರಯೋಜನ ಪಡೆಯದಿರುವುದು ಸರಿಯಲ್ಲ. ವಸ್ತುತಃ ಗಾಳಿ, ನೀರು ಮತ್ತು ಬೆಳಕು ಜಗತ್ತಿನ ಎಲ್ಲರ ಪಾಲಿಗೆ ಅನುಗ್ರಹವಾಗಿರುವಂತೆಯೇ ಸತ್ಯವು ಕೂಡ ಜಾಗತಿಕ ಅನುಗ್ರಹವಾಗಿದೆ. ಅಲ್ಲದೆ, ಗಾಳಿಯು ಪೂರ್ವದಿಂದ ಬೀಸಿ ಬಂದಿದೆಯೆಂಬ ಕಾರಣಕ್ಕೆ ನೀವು ಅದರಿಂದ ಮೂಗು ಮುಚ್ಚಿಕೊಳ್ಳುವುದಿಲ್ಲ. ನೀರಿನ ಒರತೆಯು ಅದಾವುದೋ ಬೇರೆ ನಾಡಿನಲ್ಲಿದ್ದುದರ ಕಾರಣಕ್ಕಾಗಿ ಅದನ್ನು ಗಂಟಲಲ್ಲಿಳಿಸುವುದಕ್ಕೆ ಸಂಕೋಚ ಪಡುವುದಿಲ್ಲ. ಹಾಗೆಯೇ,

ಬೆಳಕು ನಿರ್ದಿಷ್ಟ ವ್ಯಕ್ತಿಯ ದೀಪದಿಂದ ಹೊರಡುತ್ತದೆಂಬ ಕಾರಣಕ್ಕೆ ಅದರಿಂದ ಪ್ರಯೋಜನ ಪಡೆಯುವುದರಿಂದಲೂ ನೀವು ಹಿಂಜರಿಯುವುದಿಲ್ಲ. ಹಾಗಾದರೆ, ಸತ್ಯದ ಅನುಗ್ರಹವು ಅರೇಬಿಯಾದ ಮುಹಮ್ಮದ್‌ರ(ಸ) ಮೂಲಕ ಬಂದಿರುವಾಗ, ಅದನ್ನು ನಿಮ್ಮ ಮುಂದಿಡುವವರು ನಿಮ್ಮ ನಂಬಿಕೆಯವರಲ್ಲವೆಂಬ ಕಾರಣಕ್ಕಾಗಿ ಅದನ್ನು ಅಂಗೀಕರಿಸದೆ ಇರುವುದರಲ್ಲಿ ಅರ್ಥವಿದೆಯೇ?

❖ ❖ ❖ ❖